॥ ಶ್ರೀ ಮೂಲರಾಮೋ ವಿಜಯತೇ ॥

॥ ಶ್ರೀ ಗುರುರಾಜೋ ವಿಜಯತೇ ॥

ತರ್ಪಣ ವಿಧಾನ

ಪ್ರಕಾಶಕರು ;

ಶ್ರೀ ರಾಘವೇಂದ್ರ ಸೇವಾ ಸಮಿತಿ (ರಿ.)

6ನೇ ಕ್ರಾಸ್, ಸುಧೀಂದ್ರನಗರ (ಈಜುಕೊಳದ ಬಡಾವಣೆ)

ಮಲ್ಲೇಶ್ವರಂ, ಬೆಂಗಳೂರು–560 003

|| ಶ್ರೀ ಮೂಲ ರಾಮೋ ವಿಜಯತೇ ||

|| ಶ್ರೀ ಗುರುರಾಜೋ ವಿಜಯತೇ ||

ತರ್ಪಣ ವಿಧಾನ

ಶ್ರೀ ರಾಘವೇಂದ್ರ ಸೇವಾ ಸಮಿತಿ (ರಿ.)

ಆರನೇ ಕ್ರಾಸ್, (ಈಜುಕೊಳದ ಬಡಾವಣೆ) ಸಧೀಂದ್ರನಗರ
ಮಲ್ಲೇಶ್ವರಂ, ಬೆಂಗಳೂರು-560 003.

Rarest Archive

ಮುನ್ನುಡಿ

" **ತುಲಸೀದಳ ಪ್ರಕಟಣ ಮಾಲೆ** " ಯ ಮೂರನೆಯ ಪುಸ್ತಕವಾದ "**ತರ್ಪಣ ವಿಧಾನ**" ಎಂಟನೆಯ ಮುದ್ರಣ ಹೊರಬರುತ್ತಿದೆ. ಇಂದು ಜನನಿಬಿಡ ದೊಡ್ಡ ಪಟ್ಟಣಗಳಲ್ಲಿ ಪುರೋಹಿತರು ಸಿಗುವುದು ಕಷ್ಟವಾಗಿದೆ. ಮಹಾಲಯ ಅಮಾವಾಸ್ಯೆಯಂಥ ದಿನಗಳಲ್ಲಂತೂ ಪುರೋಹಿತರು ಸಿಗುವುದು ದುರ್ಲಭವೇ ಸರಿ. ಇದರಿಂದ ಆಸ್ತಿಕರಿಗೆ ನಿತ್ಯ ಕರ್ಮಾನುಷ್ಠಾನಕ್ಕೆ ಅಡಚಣೆ ಉಂಟಾಗಿ ಕರ್ಮಲೋಪವಾಗುತ್ತದೆ. ಇಂಥಹ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ಜನಸಾಮಾನ್ಯರು, ಸುಲಭವಾಗಿ ಗ್ರಹಿಸಿ, ಆಚರಿಸಲು ಅನುಕೂಲವಾಗುವಂತೆ ಈ ಹೊತ್ತಿಗೆಯಲ್ಲಿ " **ತರ್ಪಣ ವಿಧಾನ** ' ವನ್ನು ವಿವರಿಸಲಾಗಿದೆ. ಬ್ರಾಹ್ಮಣ ಬಾಂಧವರು ಇದರ ಉಪಯೋಗವನ್ನು ಪಡೆಯಬೇಕಾಗಿ ವಿನಂತಿ

ಶ್ರೀ ಈಶ್ವರನಾಮ ಸಂವತ್ಸರದ
ಚೈತ್ರ ಶುಕ್ಲ ಪಾಡ್ಯ

ಶ್ರೀ ರಾಘವೇಂದ್ರ ಸೇವಾ ಸಮಿತಿಯ ಪರವಾಗಿ
ಎಸ್. ವೆಂಕಟರಾವ್
ಗೌರವ ಕಾರ್ಯದರ್ಶಿ

Rarest Archiver

॥ ಶ್ರೀ ಗುರುಭ್ಯೋ ನಮಃ ॥

॥ ಹರಿಃ ಓಂ ॥

ತರ್ಪಣ ವಿಧಾನ

ಉಪನೀತನಾದ ಪ್ರತಿ ಒಬ್ಬ ಬ್ರಾಹ್ಮಣನು ದೇವ, ಋಷಿ, ಆಚಾರ್ಯ ಮತ್ತು ಪಿತೃ ತರ್ಪಣಗಳನ್ನು ಕೊಡಬೇಕು. ತರ್ಪಣವು ಎರಡು ವಿಧ. ಜಲ ತರ್ಪಣ ಮತ್ತು ತಿಲ ತರ್ಪಣ. ಜಲ ತರ್ಪಣವನ್ನು ಪ್ರತಿದಿನ ಬ್ರಹ್ಮಯಜ್ಞದಲ್ಲಿ ಕೊಡಬೇಕು.

ದರ್ಶ (ಅಮಾವಾಸ್ಯೆ) ಪರ್ವಕಾಲ, ಸೂರ್ಯ ಗ್ರಹಣ ಕಾಲ, ಚಂದ್ರ ಗ್ರಹಣ ಕಾಲ ಉತ್ತರಾಯಣ ಪುಣ್ಯಕಾಲ, ದಕ್ಷಿಣಾಯನ ಪುಣ್ಯಕಾಲ, ಮಾತಾ ಪಿತೃ ಶ್ರಾದ್ಧಗಳಲ್ಲಿ ಮಹಾಲಯ ಇತ್ಯಾದಿ ಷಣ್ಣವತಿ ಅಂದರೆ ತೊಂಬತ್ತಾರು ಪರ್ವ ಕಾಲಗಳಲ್ಲಿ ಪಿತೃಗಳಿಗೆ ತಿಲ ತರ್ಪಣವನ್ನು ಕೊಡಬೇಕು. ಹೀಗೆ ತರ್ಪಣ ಕೊಡುವುದರಿಂದ ದೇವ, ಋಷಿ, ಗುರು ಪಿತೃಗಳು ಸಂತೃಪ್ತರಾಗಿ ಆಶೀರ್ವದಿಸುವರು, ಆದರಿಂದ ಸಮಸ್ತ ಮಂಗಳವಾಗುವುದು. ಪುಣ್ಯ ಕ್ಷೇತ್ರ, ಪುಣ್ಯನದಿ, ಸಮುದ್ರ ಅಥವಾ ತೀರ್ಥಗಳಲ್ಲಿ ಸ್ನಾನ ಮಾಡಿದ ನಂತರ ತರ್ಪಣವನ್ನು ಆವಶ್ಯಕವಾಗಿ ಕೊಡಬೇಕು. ತಿಲ ತರ್ಪಣ (ಎಳ್ಳು) ಕೊಡಲು ಸಾಧ್ಯವಿಲ್ಲದ ಪಕ್ಷದಲ್ಲಿ ಜಲ ತರ್ಪಣವನ್ನಾದರೂ ಕೊಡಬೇಕು, ಮೂರು ದರ್ಭೆಗಳಿಂದ ಮಾಡಿದ ಪವಿತ್ರವನ್ನು ಬಲಗೈ ಅನಾಮಿಕ ಬೆರಳಿಗೆ (ಕಿರು ಬೆರಳಿನ ಪಕ್ಕದ ಬೆರಳು-ಉಂಗುರದ ಬೆರಳು) ತರ್ಪಣ ಕೋಡುವ ಕಾಲದಲ್ಲಿ ಹಾಕಿಕೊಳ್ಳಬೇಕು. ಇದು ಸಾಧ್ಯವಿಲ್ಲದ ಪಕ್ಷದಲ್ಲಿ (ಅಂದರೆ ದರ್ಭೆ ಪವಿತ್ರ ದೊರೆಯದೇ ಇದ್ದಾಗ) ಚಿನ್ನದ ಆಥವಾ ಬೆಳ್ಳಿಯ ಪವಿತ್ರದ ಉಂಗುರವನ್ನು ಧರಿಸಿಕೊಂಡು ತರ್ಪಣವನ್ನು ಕೊಡಬಹುದು. ದರ್ಭೆಯಿಂದ ಮಾಡಿದ ಪವಿತ್ರವನ್ನು ಧರಿಸುವುದೇ ಸರಿಯಾದ ಕ್ರಮ. ಉಳಿದದ್ದು ಅಪದ್ಧರ್ಮ. ಹಾಗೆಂದು ದರ್ಭೆಯಿಂದ ಮಾಡಿದ ಪವಿತ್ರ ಇರುವಾಗ ಅದನ್ನು ಬಿಟ್ಟು ಬೇರೆ ಪ್ರಯೋಗ ಮಾಡುವುದು ಸೂಕ್ತವಲ್ಲ. ದರ್ಭೆಯ ಪವಿತ್ರ ಇಲ್ಲದ ಪಕ್ಷದಲ್ಲಿ ಮೂರು ದರ್ಭೆಗಳನ್ನು ಅನಾಮಿಕ ಬೆರಳಿಗೆ ಸುತ್ತಿಕೊಂಡು ತರ್ಪಣ ಕೊಡುವ ಸಂಪ್ರದಾಯವೂ ಉಂಟು. ದರ್ಭೆಯು ಸಿಕ್ಕದಿದ್ದರೆ ಬೆರಳುಗಳ ಮಧ್ಯದಲ್ಲಿ ತುಲಸೀಗಳವನ್ನು ಸಿಕ್ಕಿಸಿಕೊಂಡಾದರೂ ತರ್ಪಣವನ್ನು ಕೊಡಬಹುದು, ತರ್ಪಣಕ್ಕಾಗಿ ಪ್ರತ್ಯೇಕ ಕಲಶೋದಕವನ್ನು ಉಪಯೋಗಿಸಬೇಕು. ಅಂದರೆ ಆಚಮನಕ್ಕೆ ಪ್ರತ್ಯೇಕ ನೀರು ಇಟ್ಟುಕೊಳ್ಳಬೇಕು. ತರ್ಪಣದ ಕಲಶಕ್ಕೆ (ಪಂಚಪಾತ್ರೆಗೆ) ಸಾಲಿಗ್ರಾಮ ನಿರ್ಮಾಲ್ಯ ತೀರ್ಥವನ್ನು ಸೇರಿಸಬೇಕು.

Rarest Archives

ಮಾತಾ ಪಿತೃಗಳ ಶ್ರಾದ್ಧಾಂಗವಾಗಿ ಪರೇಹನಿ ಅಂದರೆ ಮಾರನೇ ದಿನ ಕೊಡಬೇಕಾದ ತಿಲತರ್ಪಣದಲ್ಲಿ ಮೂರು ಜನಕ್ಕೆ ಮಾತ್ರ ತರ್ಪಣ ಕೊಡಬೇಕು. ಮಾತೃ ಶ್ರಾದ್ಧದಲ್ಲಿ ಮಾತೃ (ತಾಯಿ) ಪಿತಾಮಹಿ (ತಂದೆಯ ತಾಯಿ) ಮತ್ತು ಪ್ರಪಿತಾಮಹಿ (ತಂದೆಯ ತಂದೆಯ ತಾಯಿ) ಇವರಿಗೆ ಮಾತ್ರ ತರ್ಪಣ ಕೊಡಬೇಕು, ಅದೇ ರೀತಿ ಪಿತೃಶ್ರಾದ್ಧಾಂಗ ತರ್ಪಣವನ್ನು ಪಿತೃ (ತಂದೆ) ಪಿತಾಮಹ (ತಂದೆಯ ತಂದೆ) ಮತ್ತು ಪ್ರಪಿತಾಮಹ (ತಂದೆಯ ತಂದೆಯ ತಂದೆ) ಮೊದಲ ಹೆಸರು ಹೇಳಿ ನಂತರ ಗೋತ್ರವನ್ನು ಹೇಳಬೇಕು ಯಜುರ್ವೇದಿಗಳು ಮೊದಲು ಗೋತ್ರವನ್ನು ಹೇಳಿ ನಂತರ ಹೆಸರನ್ನು ಹೇಳಬೇಕು. ತರ್ಪಣಕ್ಕೆ ಬಾಧ್ಯಸ್ತರಾಗಿದ್ದು ಗತಿಸಿದವರ ಹೆಸರು ಗೊತ್ತಿಲ್ಲದ ಪಕ್ಷದಲ್ಲಿ "ಯಜ್ಞಪ್ಪ" ಎಂದು (ಗಂಡಸರಿಗೂ) "ಯಜ್ಞಮ್ಮ" ಎಂದು (ಹೆಂಗಸರಿಗೂ) ಹೇಳಬೇಕು. ಗೋತ್ರ ಗೊತ್ತಿಲ್ಲದ ಪಕ್ಷದಲ್ಲಿ ಕಾಶ್ಯಪಗೋತ್ರ ವೆಂದು ಹೇಳಬೇಕು. ಪಿತೃಗಳಿಗೆ ತರ್ಪಣವನ್ನು ಬಲ ಅಂಗೈಯಲ್ಲಿ ತಿಲವನ್ನು (ಎಳ್ಳನ್ನು) ಇಟ್ಟುಕೊಂಡು ಕಲಶದ ನೀರನ್ನು ಹಾಕಿಕೊಂಡು ಬಲಗೈ ಅಂಗುಷ್ಟದ (ಹೆಬ್ಬೆಟ್ಟಿನ) ಮತ್ತು ತೋರು ಬೆರಳಿನ ಬುಡಗಳ ಮಧ್ಯದಿಂದ ಮೂರು ಸಾರ್ತಿ ತಾಮ್ರದ ಪಾತ್ರೆಯಲ್ಲಿ ಕೊಡತಕ್ಕದ್ದು. ನೆಲದ ಮೇಲೆ ತರ್ಪಣದ ನೀರು ಬೀಳಬಾರದು.

ದರ್ಶಕಾಲದ ಆಚರಣೆ:- ಪ್ರತಿ ತಿಂಗಳು ಅಮಾವಸ್ಯೆಯ ದಿನ, ದ್ವಾದಶ ಪಿತೃಗಳಿಗೆ (12 ಜನಕ್ಕೆ) ತಿಲ ತರ್ಪಣ ಕೊಡಬೇಕು ದ್ವಾದಶ ಪಿತೃಗಳು ಯಾರೆಂದರೆ :

1 ಪಿತೃ ವರ್ಗ (3) ಪಿತೃ-ಪಿತಾಮಹ - ಪ್ರಪಿತಾಮಹ.
(ತಂದೆ, ತಂದೆಯ ತಂದೆ, ತಂದೆಯ ತಂದೆಯ - ತಂದೆ)

2 ಮಾತೃ ವರ್ಗ (3) ಮಾತೃ-ಪಿತಾಮಹಿ-ಪ್ರಪಿತಾಮಹಿ
(ತಾಯಿ, ತಾಯಿಯ ಅತ್ತೆ, ತಾಯಿಯ ಅತ್ತೆಯ ಅತ್ತೆ)

3 ಮಾತಾಮಹ ವರ್ಗ (3) ಮಾತಾಮಹ, ಮಾತುಃ ಪಿತಾಮಹ,
ಮಾತುಃ ಪ್ರಪಿತಾಮಹ
(ತಾಯಿಯ ತಂದೆ, ತಾಯಿಯ ತಂದೆಯ ತಂದೆ
ತಾಯಿಯ ತಂದೆಯವರ ತಂದೆ ಮತ್ತು ಅವರ ತಂದೆ

4 ಮಾತಾಮಹಿ ವರ್ಗ (3) ಮಾತಾಮಹಿ, ಮಾತಃ ಪಿತಾಮಹಿ, ಮಾತಃ
ಪ್ರಪಿತಾಮಹಿ
(ತಾಯಿಯ ತಾಯಿ, ಅವರ ಅತ್ತೆ, ಅವರ ಅತ್ತೆ)

Rarest Archive

ತಂದೆ ಅಥವಾ ತಾಯಿಯ ಪ್ರತಿ ವರ್ಷದ ತಿಥಿ ಮತ್ತು ಪ್ರತಿ ತಿಂಗಳ ಆಮಾವಾಸ್ಯೆ ಈ ಎರಡು ಸಂದರ್ಭಗಳು ವಿನಹಾ ಮಿಕ್ಕ ಇತರ ಕಾಲಗಳ ಅಂದರೆ ಸೂರ್ಯಗ್ರುಹಣ, ಚಂದ್ರಗ್ರುಹಣ, ಪ್ರತಿ ತಿಗಳಲ್ಲೂ ಬರುವ ಸಂಕ್ರಮಣ, ಮಹಾಲಯ ಕಾಲ, ಉಪಾಕರ್ಮ, ಪುಣ್ಯ ನದೀ, ತೀರ್ಥಕ್ಷೇತ್ರ ಮತ್ತು ಸಮುದ್ರಗಳಲ್ಲಿ, ಸಮಸ್ತ ಪಿತೃಗಳಿಗೂ ತಿಲತರ್ಪಣವನ್ನು ಕೊಡಬೇಕು. ತಿಲತರ್ಪಣವನ್ನು ಮೃತರಾದವರಿಗೆ ಕೊಡಬೇಕೇ ವಿನಹಾ ಜೀವಂತರಿಗೆ ಕೊಡಬಾರದು.

ಮೇಲೆ ಹೇಳಿದ 4 ವರ್ಗಗಳು ಅಂದರೆ 1 ಪಿತೃ ವರ್ಗ 2 ಮಾತೃವರ್ಗ 3 ಮಾತಾಮಹ ವರ್ಗ ಮಾತಾಮಹಿ ವರ್ಗಗಳಲ್ಲಿ ಮೊದಲಿನವರು ಮೃತರಾಗುವ ತನಕ ಮಿಕ್ಕವರಿಗೆ ತರ್ಪಣ ಹುಟ್ಟುವುದಿಲ್ಲ. ಉದಾಹರಣೆ : ತಂದೆ ಜೀವಂತವಾಗಿರುವತನಕ ತರ್ಪಣದ ಅಧಿಕಾರ ಬರುವುದಿಲ್ಲ. 2. ತಾಯಿ ಜೀವಂತವಾಗಿರುವತನಕ ಮಾತೃ ವರ್ಗ ತರ್ಪಣಕ್ಕೆ ಬರುವುದಿಲ್ಲ, ಹಾಗೆಯೇ ಮಾತಾಮಹ ಅಂದರೆ ತಾಯಿಯ ತಂದೆ ಮತ್ತು ತಾಯಿಯ ತಾಯಿ ಜೀವಂತವಾಗಿರುವಾಗ ಆಯಾ ವರ್ಗದವರಿಗೆ ತರ್ಪಣ ಹುಟ್ಟುವುದಿಲ್ಲ, ಇನ್ನು ಪ್ರತಿ ಒಂದು ವರ್ಗದಲ್ಲಿಯು ಮೊದಲಿನವರು ಮೃತರಾಗಿ ಎರಡನೆಯವರಾಗಲಿ ಅಥವಾ ಮೂರನೆಯವರಾಗಲಿ ಜೀವಂತರಾಗಿದ್ದರೆ, ಅವರ ಮುಂದಿನವರಿಗೆ ತರ್ಪಣ ಕೊಡಬೇಕಾದ ವಿಚಾರವನ್ನು ವಿಚಾರಿಸಿ ತಿಳಿದು ಕೊಳ್ಳಬೇಕು.

ತರ್ಪಣ ಕೊಡುವ ಕ್ರಮ

1. ಎರಡು ಸಲ ಆಚಮನ ಮಾಡಬೇಕು ಪೂರ್ವಾಭಿಮುಖವಾಗಿ ಕುಳಿತುಕೊಳ್ಳಬೇಕು. ಓಂ ಕೇಶವಾಯಸ್ವಾಹಾ। ಓಂ ನಾರಾಯಣಾಯ ಸ್ವಾಹಾ । ಓಂ ಮಾಧವಾಯ ಸ್ವಾಹಾ । ಓಂ ಗೋವಿಂದಾಯ ನಮಃ ಓಂ ವಿಷ್ಣವೇ ನಮಃ। ಓಂ ಮಧುಸೂಧನಾಯ ನಾಮಃ। ಓಂ ತ್ರಿವಿಕ್ರಮಾಯ ನಮಃ । ಓಂ ವಾಮನಾಯ ನಮಃ। ಓಂ ಶ್ರೀಧರಾಯ ನಮಃ। ಓಂ ಹೃಷಿಕೇಶಾಯ ನಮಃ। ಓಂ ವಾಸುದೇವಾಯ ನಮಃ। ಓಂ ಪ್ರದ್ಯುಮ್ನಾಯ ನಮಃ। ಓಂ ಅನಿರುದ್ಧಾಯ ನಮಃ। ಓಂ ಪುರುಷೋತ್ತಮಾಯ ನಮಃ। ಓಂ ಅಧೋಕ್ಷಜಾಯ ನಮಃ ಓಂ ನಾರಸಿಂಹಾಯ ನಮಃ। ಓಂ ಅಚ್ಯುತಾಯ ನಮಃ। ಓಂ ಜನಾರ್ಧನಾಯ ನಮಃ ಓಂ ಉಪೇಂದ್ರಾಯ ನಮಃ। ಓಂ ಹರಯೇ ನಮಃ। ಓಂ ಶ್ರೀ ಕೃಷ್ಣಾಯ ನಮಃ॥

Rarest Archiver

ಒಂದೊಂದು ನಾಮೋಚ್ಚಾರಣ ಕಾಲದಲ್ಲಿಯೂ ನಾಮ ಹೇಳುವುದಕ್ಕೆ ಮುಂಚೆ ಬಲಗೈ ಅಂಗೈಯಲ್ಲಿ ಒಂದು ಉದ್ದಿನಕಾಳು ಮುಳುಗುವಷ್ಟು ಮಾತ್ರ ನೀರನ್ನು ಹಾಕಿಕೊಂಡು ನಾಮೋಚ್ಚಾರಣೆ ಸ್ವಾಹಾಕಾರವನ್ನು ಮಾಡಿ, ನಂತರ ಆ ನೀರನ್ನು ಕುಡಿಯಬೇಕು.

2. ದರ್ಭೆ ಪವಿತ್ರವನ್ನು ಬ್ರಾಹ್ಮಣರ ಕೈಯಿಂದ ಸ್ವೀಕಾರ ಮಾಡಿ ಪವಿತ್ರವನ್ನು ಧರಿಸುವ ಮುಂಚೆ ಕೆಳಕಂಡ ಮಂತ್ರವನ್ನು ಪಠಿಸಬೇಕು.

ಋಗ್ವೇದಿಗಳು

ಓಂ ಪವಿತ್ರಂತೇ ವಿತತಂಬ್ರಹ್ಮಣಸ್ಪತೆ। ಪ್ರಭುರ್ ಗಾತ್ರಾಣಿ ಪರ್ಯೇಷು ವಿಶ್ವತಃ। ಅತಪ್ತತನೂರ್ನತ ದಾವೋ ಅಶ್ನುತೇ ಶೃತಾಸ ಇದ್ದ ಹಂತಸ್ ತತ್ ಸಮಾಶತ॥

ಯಜುರ್ವೇದಿಗಳು

ಪವಿತ್ರವಂತಃ ಪರಿವಾಜ ಮಾಸತೇ ಪಿತೇಷಾಂ ಪ್ರತ್ನೋ ಅಭಿರಕ್ಷತಿ। ವ್ರತಂ ಮಹಃ ಸಮುದ್ರಂ ವರುಣಸ್ತಿರೋ ದಧೇ ಧೀರಾ ಇಚ್ಛೇ ಕೈರ್ಧರಣೇಷ್ವಾರಭಂ।

ನಂತರ ಪವಿತ್ರವನ್ನು ಬಲಗೈನ ಅನಾಮಿಕ ಬೆರಳಿಗೆ (ಕಿರು ಬೆರಳಿನ ಪಕ್ಕದ ಬೆರಳು - ಉಂಗುರದ ಬೇರಳು) ಧರಿಸಬೇಕು, ದರ್ಭೆಯಿಂದ ಮಾಡಿದ ಪವಿತ್ರ ಇಲ್ಲದ ಪಕ್ಷದಲ್ಲಿ ಮೂರು ದರ್ಭೆಗಳನ್ನೇ ಅನಾಮಿಕ ಬೆರಳಿಗೆ ಸುತ್ತಿಕೊಂಡು ಅಥವಾ ತುಲಸೀ ದಳವನ್ನು ಬಲಗೈ ಬೆರಳಲ್ಲಿ ಸಿಕ್ಕಿಸಿಕೊಂಡು ತರ್ಪಣ ಕೊಡಬೇಕು.

3. ಪುನಾರಾಚಮನವನ್ನು ಮಾಡಬೇಕು. ಮೇಲಿನ ಸಂಖ್ಯೆ 1 ನ್ನು ನೋಡಿರಿ

4. ಪ್ರಾಣಾಯಾಮ: ಬಲಗೈ ಬೆರಳಿಂದ ಮೂಗನ್ನು ಹಿಡಿದುಕೊಂಡು ಕೆಳಗೆ ಕಂಡ ಮಂತ್ರವನ್ನು ಪಠಿಸಬೇಕು.

ಓಂ ಪ್ರಣವಸ್ಯ ಪರಬ್ರಹ್ಮಋಷಿಃ। ಪರಮಾತ್ಮ ದೇವತಾ। ದೇವಿಗಾಯತ್ರೀ ಛಂದಃ ಓಂ ಪ್ರಣಾಯಾಮೇ ವಿನಿಯೋಗಃ

ಓಂ ಭೂಃ। ಓಂ ಭುವಃ। ಓಂ ಸುವಃ। ಓಂ ಮಹಃ। ಓಂ ಜನಃ। ಓಂ ತಪಃ। ಓಂ ಸತ್ಯಂ। ಓಂ ತತ್ಸವಿತುರ್ವರೇಣ್ಯಂ। ಭರ್ಗೋ ದೇವಸ್ಯ ಧೀಮಹಿ। ಧೀಯೋ ಯೋನಃ ಪ್ರಚೋದಯಾತ್। ಓಂ ಆಪೋಜ್ಯೋತೀರಸೋ ಅಮೃತಂ ಬ್ರಹ್ಮ ಭೂರ್ಭುವಃ ಸ್ವರೋಂ॥

Rarest Archive

5. ದೇಶಕಾಲಾದಿ ಉಚ್ಚಾರಣೆ - ಬಲದ ತೊಡೆಯ ಮೇಲೆ ಎಡಗೈಯನ್ನು ಮೇಲ್ಮುಖವಾಗಿ ಬಲಗೈಯನ್ನು ಅದರ ಮೇಲೆ ಕೆಳಮುಖವಾಗಿ ಇಟ್ಟು ಕೊಂಡು ಪಠಿಸುವುದು.

ಶ್ರೀ ಗೋವಿಂದ ಗೋವಿಂದ ಶ್ರೀ ಮಹಾ ವಿಷ್ಣೋರಾಜ್ಞಯಾ ಪ್ರವರ್ತಮಾನಸ್ಯ ಅದ್ಯ ಬ್ರಹ್ಮಣಃ ದ್ವಿತೀಯ ಪರಾರ್ಧೆ ಶ್ವೇತ ವರಾಹಕಲ್ಪೆ ವೈವಸ್ವತ ಮನ್ವಂತರೇ ಕಲಿಯುಗೇ, ಪ್ರಥಮಪಾದೇ ಜಂಭೂದ್ವೀಪೇ, ಭರತವರ್ಷೇ, ಭರತಖಂಡೇ, ದಂಡಕಾರಣ್ಯೇ ಗೋದಾವರ್ಯಾಃ ದಕ್ಷಿಣೇತೀರೇ, ಶಾಲೀವಾಹನಶಕೇ, ಬೌದ್ಧಾವತಾರೇ, ರಾಮಕ್ಷೇತ್ರೆ (ಸ್ವಂತ ಮನೆಯಾದರೆ) ಸ್ವಗೃಹೇ (ಇಲ್ಲವಾದಲ್ಲಿ ಸಂದರ್ಭಕ್ಕೆ ತಕ್ಕಂತೆ ಮಿತ್ರಗೃಹೇ, ದೇವಸ್ಥಾನ, ಪುಣ್ಯನದಿ-ತೀರ್ಥ ಸಮುದ್ರ ಇತ್ಯಾದಿಗಳ ಹೆಸರನ್ನು ಹೇಳಬೇಕು, ಸಾಲಿಗ್ರಾಮ ಹರಿ ಗುರುವೃಂದಾವನ ವಿಷ್ಣು ವೈಷ್ಣವ ಸನ್ನಿಧೌ ಎಂದು ಹೇಳಬೇಕು) ಅಸ್ಮಿನ್ ವರ್ತಮಾನೇ ಚಂದ್ರಮಾನೇನ ಪ್ರಭವಾದಿ ಷಷ್ಠಿ ಸಂವತ್ಸರಾಣಾಂ ಮಧ್ಯೇ..................ಸಂವತ್ಸರೇ...............ಉತ್ತರಾಯಣೇ / ದಕ್ಷಿಣಯನೇ...... ಋತೌ.................. ಮಾಸೇ........... ಶುಕ್ಲ / ಕೃಷ್ಣಪಕ್ಷೇ..........ತಿಥೌ........ವಾಸರಃ ಯುಕ್ತಾಯಾಂ ವಿಷ್ಣು ನಕ್ಷತ್ರ ವಿಷ್ಣು ಯೋಗ ವಿಷ್ಣುಕರಣ ಏವಂ ಗುಣ ವಿಶೇಷಣ ವಿಶಿಷ್ಟಾಯಾಂ ಪುಣ್ಯತಿಥೌ ಪ್ರಾಚೀನಾವೀತಿ, ಎಂದು ಹೇಳಿ ಯಜ್ಞೋಪವೀತವನ್ನು ಎಡಕ್ಕೆ ಹಾಕಿಕೊಂಡು ದಕ್ಷಿಣ ದಿಕ್ಕಿನ ಕಡೆಗೆ ತಿರುಗಿಕೊಳ್ಳಬೇಕು.

3. ಸಂಕಲ್ಪ ಕ್ರಮ - ಬೇರೆ ಬೇರೆ ಕಾಲಗಳಲ್ಲಿ ಆಯಾ ಕರ್ಮಗಳನ್ನನುಸರಿಸಿ ಈ ರೀತಿ ಸಂಕಲ್ಪ ಮಾಡಬೇಕು.

1) ಪಿತೃ ಅಥವಾ ಮಾತೃ ವಾರ್ಷಿಕ ಶ್ರಾದ್ಧದಲ್ಲಿ ಕೊಡಬೇಕಾದ ತರ್ಪಣ (ಪರೇಹನಿ ತರ್ಪಣ). ಇದು ಮುಂಚೆಯೇ ತಿಳಿಸಿರುವಂತೆ ಮೂರು ಜನಪಿತೃಗಳಿಗೆ ಮಾತ್ರ ಕೊಡಬೇಕು.

ಅಸ್ಮತ್ ಪಿತೃ ಅಂತರ್ಗತ ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀಮಧ್ವವಲ್ಲಭ ಜನಾರ್ಧನ ವಾಸುದೇವ ಪ್ರೇರಣಯಾ ಶ್ರೀ ಮಧ್ವವಲ್ಲಭ ಜನಾರ್ಧನ ವಾಸುದೇವ ಪ್ರೀತ್ಯರ್ಥಂ ಪಿತೃಣಾಂ ಅಕ್ಷಯ ಪುಣ್ಯಲೋಕಾ ವಾಪ್ತ್ಯರ್ಥಂ ಪಿತುಃ / ಮಾತೃಃ ಪ್ರತಿ ಸಾಂವತ್ಸರಿಕ ಶ್ರಾದಾಂಗ ದೇಶ, ಕಾಲ ದೇಹಧರ್ಮ ವೈಪರೀತ್ಯೇನ ಪರೇಹನಿ ಕರ್ತವ್ಯ ತಿಲತರ್ಪಣಂ ಸದ್ಯಃ ಕರಿಷ್ಯೇ ಎಂದು ಹೇಳಿ ಎಳ್ಳು ನೀರನ್ನು ತಟ್ಟೆಯಲ್ಲಿ ಬಿಡಬೇಕು.

2) ಅಮಾವಸ್ಯೆಯಲ್ಲಿ ದರ್ಶ ಪ್ರಯುಕ್ತ ಕೊಡಬೇಕಾದ ತಿಲತರ್ಪಣದ ಸಂಕಲ್ಪ :

Rarest Archiver

ಇದು ಮುಂಚೆಯೇ ತಿಳಿಸಿರುವಂತೆ ದ್ವಾದಶ (12 ಜನ) ಪಿತೃಗಳಿಗೆ ಮಾತ್ರ ಕೊಡಬೇಕಾದ, ತರ್ಪಣ ಎರಡು, ಮೂರು ಮತ್ತು ನಾಲ್ಕು ವರ್ಗದಲ್ಲಿ, ಮೊದಲನೆಯವರು ಜೀವಂತರಾಗಿದ್ದರೆ ಅವರ ಮೇಲಿನವರಿಗೆ ತರ್ಪಣ ಹುಟ್ಟುವುದಿಲ್ಲ ವೆಂದು ಮುಂಚೆಯೇ ಹೇಳಿದೆ. ಆದುದರಿಂದ ಹಾಗಿದ್ದ ಸಂದರ್ಭದಲ್ಲಿ ಸಂಕಲ್ಪದಲ್ಲಿ ಆ ವರ್ಗವನ್ನು ತಾಜ್ಯ ಮಾಡಬೇಕು.

ದರ್ಶ ಪ್ರಯುಕ್ತ ಸಂಕಲ್ಪ : ಅಸ್ಮತ್ ಪಿತ್ರಾದಿ ದ್ವಾದಶ ಪಿತೃಣಾಂ,

ಅಂತರ್ಗತ ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀ ಮಧ್ವವಲ್ಲಭ ಜನಾರ್ಧನ ವಾಸುದೇವ ಪ್ರೇರಣಾಯ ಶ್ರೀ ಮಧ್ವ ವಲ್ಲಭ ಜನಾರ್ಧನ ವಾಸುದೇವ ಪ್ರೀತ್ಯರ್ಥಂ ಪಿತೃಣಾಂ ಅಕ್ಷಯ ಪುಣ್ಯಲೋಕಾವಾಪ್ತ್ಯರ್ಥಂ ದರ್ಶಶ್ರಾದ್ಧ ತಿಲತರ್ಪಣಂ ಕರಿಷ್ಯೇ ಎಂದು ಹೇಳಿ ಎಳ್ಳು ನೀರು ತಟ್ಟೆಯಲ್ಲಿ ಬಿಡಬೇಕು.

3. ಈ ಮೇಲ್ಕಂಡ ಎರಡು ಕಾಲಗಳಲ್ಲದೆ ಮಿಕ್ಕ ಸಂದರ್ಭಗಳಲ್ಲಿ ಸಮಸ್ತ ಪಿತೃಗಳಿಗೂ ತಿಲತರ್ಪಣ ಕೊಡಬೇಕು. ಆ ಸಂದರ್ಭಗಳ್ಯಾವೆಂದರೆ 1) ಪುಣ್ಯನದಿ ಸ್ನಾನಾನಂತರ 2) ತೀರ್ಥ ಕ್ಷೇತ್ರ 3) ಭಾದ್ರಪದ ಮಾಸ ಕೃಷ್ಣ ಪಕ್ಷದಲ್ಲಿ ಬರುವ ಪಿತೃ ಪಕ್ಷದಲ್ಲಿ (ಮಹಾಲಯ) 4) ಸೂರ್ಯಚಂದ್ರ ಗ್ರಹಣಕಲಗಳು 5) ಸಮುದ್ರ ಸ್ನಾನಾನಂತರ 6) ಉಪಾಕರ್ಮ 7) ಷಣ್ಣವತಿ ಶ್ರಾದ್ಧ (ಇವು ಯಾವುದೆಂದರೆ ವೈಧೃತಿ, ವ್ಯತೀಪಾತ, ಇರುವ ದಿನಗಳು 24, ಮನ್ವಾದಿಗಳು 14, ಯುಗಾದಿಗಳು 4, ಸಂಕ್ರಮಣಗಳು 12, ಅಮಾವಾಸ್ಯೆಗಳು 12, ಭಾದ್ರಪದ, ಮಾರ್ಗಶಿರ, ಪುಷ್ಯ, ಮಾಘ, ಫಾಲ್ಗುಣ ಈ 5 ತಿಂಗಳುಗಳಲ್ಲಿ ಕೃಷ್ಣ ಪಕ್ಷ ಸಪ್ತಮಿ-ಅಷ್ಟಮಿ-ನವಮಿ ಅಷ್ಟಕಾದಿಗಳು, ಪಕ್ಷ ಮಾಸದ 15 ದಿನಗಳು, ಒಟ್ಟು 96 ಶ್ರಾದ್ಧ ವಿಹಿತ ದಿನಗಳು).

4. ಮಾಸ ಸಂಕ್ರಮಣ ಸಂಕಲ್ಪ

ಉಕತ್ತರಾಯಣ: ಮಕರಸಂಕ್ರಮಣ ಮಹಾಪರ್ವಕಾಲ ಅಥವಾ ದಕ್ಷಿಣ ಕರ್ಕಾಟಕ ಸಂಕ್ರಮಣ ಮಹಾ ಪರ್ವಕಾಲ ಅಥವಾ ಇತರ ಸಂಕ್ರಮಣಗಳಲ್ಲಿ ಅಂದರೆ ಮೇಷ। ವೃಷಭ। ಮಿಥುನ। ಕರ್ಕಾಟಕ। ಸಿಂಹ। ಕನ್ಯಾ। ತುಲಾ। ವೃಶ್ಚಿಕ। ಧನಸ್ಸು। ಮಕರ। ಕುಂಭ। ಮೀನ। ಸಂಕ್ರಮಣ ಕಾಲ ... ಪಿತರಾದಿ ಸಮಸ್ತ ಪಿತೃಣಾಂ

Rarest Archiver

ಅಕ್ಷಯ ಪುಣ್ಯಲೋಕಾಪ್ರಾಪ್ತ್ಯರ್ಥಂ ಪಿತ್ರಾದಿ ಸಮಸ್ತ ಪಿತೃಣಾಂತರ್ಗತ ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀಮಧ್ವವಲ್ಲಭ ಜನಾರ್ಧನ ವಾಸುದೇವ ಪ್ರೇರಣಾಯಾ ಶ್ರೀಮಧ್ವ ವಲ್ಲಭ ಜನಾರ್ಧನ ವಾಸುದೇವ ಪ್ರೀತ್ಯರ್ಥಂ ಸದ್ಯಃ ತಿಲತರ್ಪಣಂ ಕರಿಷ್ಯೆ ಅಂತ ಹೇಳಿ ಎಳ್ಳು ನೀರು ಬಿಟ್ಟು ಈ ಪುಸ್ತಕದ ಕೊನೆಯಲ್ಲಿ ಕೊಟ್ಟಿರುವ ತರ್ಪಣ ಕ್ರಮದಂತೆ ತಿಲತರ್ಪಣವನ್ನು ಕೊಡಬೇಕು.

2. ಗ್ರಹಣಕಾಲ ಸಂಕಲ್ಪ

ಸೂರ್ಯೋಪರಾಗ ಪುಣ್ಯಕಾಲೇ / ಚಂದ್ರೋಪರಾಗ ಪುಣ್ಯಕಾಲೆ ಪಿತ್ರಾದಿ ಸಮಸ್ತ ಪಿತೃಣಾಂ ಅಕ್ಷಯ ಪುಣ್ಯಲೋಕಾವಾಪ್ತ್ಯರ್ಥಂ ಪಿತ್ರಾದಿ ಸಮಸ್ತ ಪಿತೃಣಾಂತರ್ಗತ ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀಮಧ್ವವಲ್ಲಭ ಜನಾರ್ಧನ ವಾಸುದೇವ ಪ್ರೇರಣಯಾ ಶ್ರೀಮಧ್ವವಲ್ಲಭ ಜನಾರ್ಧನ ವಾಸುದೇವ ಪ್ರೀತ್ಯರ್ಥಂ ಸದ್ಯಃ ತಿಲತರ್ಪಣಂ ಕರಿಷ್ಯೇ

ಗ್ರಹಣಹಿಡಿದಾಗಿನಿಂದ ಬಿಡುವವರೆಗೂ ಇರುವ ಕಾಲವನ್ನು ಗ್ರಹಣ ಪುಣ್ಯ ಕಾಲವೆಂದು ಕರೆಯುತ್ತಾರೆ. ಚಂದ್ರ ಗ್ರಹಣ ಕಾಲದಲ್ಲಿ ಪುಣ್ಯಕಾಲದ ಮಧ್ಯದಲ್ಲಿಯು, ಸೂರ್ಯಗ್ರಹಣದಲ್ಲಿ ಪೂರ್ವ ಭಾಗದಲ್ಲಿಯು ತರ್ಪಣ ಕೊಡಬೇಕು. ಗ್ರಹಣ ಪರ್ವ ಕಾಲ ಮಹಾ ಪವಿತ್ರ ಕಾಲ - ಜಾತಾ ಶೌಚ -ಮೃತಾ ಶೌಚ ವಿದ್ದವರು ಕೂಡ ತರ್ಪಣ ದಾನಾದಿಗಳನ್ನೂ ಕೊಡಬಹುದು. ಸರ್ವರು ಗ್ರಹಣ ಸ್ಪರ್ಶ ಮತ್ತು ಮೋಕ್ಷ ಕಾಲಗಳಲ್ಲಿ ಸ್ನಾನಮಾಡಬೇಕು. ರಜಸ್ವಲೆಯಾದ ಸ್ತ್ರಿಯರು ಕೂಡ ಮಾಡಬಹುದು ಎಂದು ಶಾಸ್ತ್ರಗಳು ಹೇಳುತ್ತವೆ. ಈ ವಿಚಾರ ಆವರವರ ವೃದ್ಧಾಚಾರದಂತೆ ನಡೆದುಕೊಳ್ಳಬಹುದು. ಗ್ರಹಣ ಪರ್ವಕಾಲ ಬಹಳ ಕಮ್ಮಿಯಿದ್ದಾಗ ಸಮಸ್ತ ಪಿತೃಗಳ ಹೆಸರನ್ನು ಗೋತ್ರರೂಪಾದಿಗಳನ್ನು ಉಚ್ಚರಿಸಲು ಕಾಲಾವಕಾಶಯಿಲ್ಲದಾಗ ಈ ಮಂತ್ರ ಹೇಳಿ ತರ್ಪಣಕೊಡಬಹುದು.

ಆಬ್ರಹ್ಮಸ್ತಂಭ ಪರ್ಯಂತಂ ದೇವಋಷಿ ಪಿತೃ ಮಾನವಾಃ।
ತೃಪ್ಯಂತು ಪಿತರೇಸ್ಸರ್ವೇ ಮಾತೃ ಮಾತಾ ಮಹಾದಯಃ ॥
ಅತೀತ ಕುಲ ಕೋಟಿನಾಂ ಸಪ್ತದ್ವೀಪ ನಿವಾಸಿನಾಂ ।
ಆಬ್ರಹ್ಮ ಭುವನಾಲ್ಲೋಕಂ ಇದುಮಸ್ತು ತಿಲೋದಕಂ ॥

Rarest Archiver

3. ಪುಣ್ಯನದೀ / ತೀರ್ಥಕ್ಷೇತ್ರ / ಪುಣ್ಯತೀರ್ಥ ಪುಣ್ಯ ದಿನ (ರಥಸಪ್ತಮೀ ಇತ್ಯಾದಿ) ಸಂಕಲ್ಪ

......................ನದೀ ಅಭಿಮಾನಿ ದೇವತಾ ಅಭಿನ್ನ ಅಥವಾ

.... ತೀರ್ಥಾಭಿಮಾನಿ ದೇವತಾ ಅಭಿನ್ನ ಅಥವಾ

......................ಕ್ಷೇತ್ರಾಭಿಮಾನಿ ದೇವತಾ ಅಭಿನ್ನ ಅಥವಾ

ಪುಣ್ಯದಿನ (ರಥಸಪ್ತಮೀ) ಪುಣ್ಯಕಾಲ ಪ್ರಯುಕ್ತ ಶ್ರೀಮದ್ಧ್ವವಲ್ಲಭ ಜನಾರ್ಧನ ವಾಸುದೇವ ಪ್ರೀತ್ಯರ್ಥಂ

ಪಿತ್ರಾದಿ ಸಮಸ್ತ ಪಿತೃಣಾಂ ಅಕ್ಷಯ ಪುಣ್ಯಲೋಕಾವಾಪ್ತ್ಯರ್ಥಂ ಪಿತ್ರಾದಿ ಸಮಸ್ತ ಪಿತೃಣಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಮದ್ಧ್ವವಲ್ಲಭ ಜನಾರ್ಧನ ವಾಸುದೇವ ಪ್ರೇರಣಯಾ ಶ್ರೀಮದ್ಧ್ವವಲ್ಲಭ ಜನಾರ್ಧನ ವಾಸುದೇವ ಪ್ರೀತ್ಯರ್ಥಂ ಸದ್ಯಃ ತಿಲತರ್ಪಣಂ ಕರಿಷ್ಯೇ.

4. **ಪಿತೃಪಕ್ಷ** - (ಭಾದ್ರಪದ ಮಾಸ ಕೃಷ್ಣಪಕ್ಷದಲ್ಲಿ ಮಾಡುವ ಸಂಕಲ್ಪ) :

ಕನ್ಯಾಗತೇ ಸವಿತರಿ ಆಷಾಢ್ಯಾದಿ ಪಂಚಮಹಾ ಅಪರಪಕ್ಷೇ ಸಕೃನ್ ಮಹಾಲಯ ಪರ್ವಕಾಲ ಪ್ರಯುಕ್ತ ಅಥವಾ ಮಹಾಲಯಶ್ರಾದ್ಧಾಂಗ ಪರೇಹನಿ ಕರ್ತವ್ಯ ತಿಲ ತರ್ಪಣಂಕರಿಷ್ಯೆ ಅಥವಾ ಮಹಾಲಯ ಪ್ರಯುಕ್ತ ಪಿತ್ರಾದಿ ಸಮಸ್ತ ಪಿತೃಣಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಮದ್ಧ್ವವಲ್ಲಭ ಜನಾರ್ಧನ ವಾಸುದೇವ ಪ್ರೇರಣಾಯಾ ಶ್ರೀಮದ್ಧ್ವವಲ್ಲಭ ಜನಾರ್ಧನ ವಾಸುದೇವ ಪ್ರೀತ್ಯರ್ಥಂ ಸದ್ಯಃ ತಿಲತರ್ಪಣಂ ಕರಿಷ್ಯೇ.

ತರ್ಪಣ ಕ್ರಮ

ಈ ಕ್ರಮದಿಂದ ತರ್ಪಣ ಕೊಡಬೇಕು

ಕರ್ತನು ಪೂವಾಭಿಮುಖವಾಗಿ ಕೂತು ಆಚಮನ ಮಾಡಿ ದೇವಿ ಗಾಯತ್ರೀ ಛಂದಃ ಎಂಬ ಮಂತ್ರವನ್ನು ಪಠಿಸಿ ದೇಶ ಕಾಲಾದಿಗಳನ್ನು ಉಚ್ಚರಿಸಿ ಸಂದರ್ಭಕ್ಕೆ ತಕ್ಕ ಸಂಕಲ್ಪ ಮಾಡಿ ಯಜ್ಞೋಪವೀತವನ್ನು ಎಡಕ್ಕೆ ಹಾಕಿಕೊಂಡು ನಂತರ ದಕ್ಷಿಣಾಭಿಮುಖವಾಗಿ ತಿರುಗಿಕೊಂಡು ಬಲ ಮೊಣಕಾಲನ್ನು ನೆಲಕ್ಕೆ ಊರಿ ಬಲಗೈಯಲ್ಲಿ ತಿಲವನ್ನು ಹಾಕಿಕೊಂಡು ಉದ್ಧರಣೆಯಿಂದ ಕಲಶೋದಕವನ್ನು ಬಲಗೈಗೆಹಾಕಿಕೊಂಡು (ಕಲಶದ ಪಂಚ ಪಾತ್ರೆಯನ್ನು ಎತ್ತದೆ) ಹೆಬ್ಬೆರಳು ಮತ್ತು

Rarest Archiver

ತೋರು ಬೆರಳುಗಳ (ಅಂಗುಷ್ಠ ತರ್ಜನಿ ಬೆರಳುಗಳ) ಬುಡದ ಮಧ್ಯದಿಂದ ತರ್ಪಣವನ್ನು ಮೂರು ಸಾರ್ತಿ ತರ್ಪಯಾಮಿ ತರ್ಪಯಾಮಿ ತರ್ಪಯಾಮಿ ಎಂದು ಕೊಡಬೇಕು. ಕಲಶದ ನೀರಿಗೆ ನಿರ್ಮಾಲ್ಯ ತೀರ್ಥವನ್ನು ಸೇರಿಸಬೇಕು. ತರ್ಪಣ ಕೊಟ್ಟ ನೀರು ನೆಲದ ಮೇಲೆ ಬೀಳಬಾರದು. ತಾಮ್ರದ ಪಾತ್ರೆಯಲ್ಲಿ ತರ್ಪಣ ಕೊಡಬೇಕು. ಸಂದರ್ಭಾನುಸಾರ 3.12 ಅಥವಾ ಸಮಸ್ತ ಪಿತೃಗಳಿಗೆ ತರ್ಪಣ ಕೊಟ್ಟಾದ ಮೇಲೆ ಯಜ್ಞೋಪವೀತವನ್ನು, ವನಮಾಲೆಯಾಗಿ ಹಾಕಿಕೊಳ್ಳ ಬೇಕು. ಉಳಿದಿರುವ ಎಳ್ಳು ಅಷ್ಟನ್ನೂ ಈ ಕೆಳಗಿನ ಮಂತ್ರವನ್ನು ಹೇಳಿ ತರ್ಪಣ ಕೊಡಬೇಕು.

ಆಬ್ರಹ್ಮ ಸ್ತಂಭ ಪರ್ಯಂತಂ ದೇವ ಋಷಿ ಪಿತೃ ಮಾನವಾಃ।
ತೃಪ್ಯಂತು ಪಿತರೇಸ್ಸರ್ವೇ ಮಾತೃ ಮಾತಾ ಮಹಾದಯಃ॥ ॥೧॥
ಅತೀತ ಕುಲ ಕೋಟಿನಾಂ ಸಪ್ತದ್ವೀಪ ನಿವಾಸಿನಾಂ।
ಆಬ್ರಹ್ಮ ಭುವನಾಲ್ಲೋಕೆ ಇದುಮಸ್ತು ತಿಲೋದಕಂ ॥ ॥೨॥

ಯಜ್ಞೋಪವೀಪದ ಬ್ರಹ್ಮಗ್ರಂಟನ್ನು, ಕಲಶೋದಕದ ನೀರಿನಲ್ಲಿ ಅದ್ದಿ ಬಲಗಣ್ಣು ನಂತರ ಎಡಗಣ್ಣಿಗೆ ಈ ಕೆಳಗಿನ ಮಂತ್ರ ಹೇಳಿ ಒತ್ತಿಕೊಳ್ಳಬೇಕು.

ಯೇ ಕೇ ಚಾಸ್ಮತ್ಕುಲೇ ಜಾತಾ ಅಪುತ್ರಾ ಗೋತ್ರಣೋ ಮೃತಾಃ।
ತೇ ಗೃಹ್ಣಂತು ಮಯಾ ದತ್ತಂ ಸೂತ್ರ ನಿಷ್ಪೀಡನೋದಕಂ॥

ಪೂರ್ವಕ್ಕೆ ತಿರುಗಿಕೊಂಡು ಸರಿಯಾಗಿ ಪದ್ಮಾಸನದಲ್ಲಿ ಕುಳಿತುಕೊಂಡು ನಂತರ ಯಜ್ಞೋಪವೀತವನ್ನು ಬಲಕ್ಕೇ ಹಾಕಿಕೊಂಡು

ಯಸ್ಯ ಸ್ಮೃತ್ಯಾಚ ನಾಮೋಕ್ತ್ಯಾ ತಪಃ ತರ್ಪಣ ಕ್ರಿಯಾದಿಷು ।
ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋ ವಂದೆ ತಮಚ್ಯುತಂ
ಮಂತ್ರಹೀನಂ ಕ್ರಿಯಾಹೀನಂ ಭಕ್ತಿ ಹೀನಂ ಜನಾರ್ಧನ
ಯತ್ಕೃತಂತು ಮಯಾದೇವ ಪರಿಪೂರ್ಣಂ ತದಸ್ತುಮೇ
ಎಂದು ಹೇಳಿ.

ಅನೇನ (ಶ್ರಾದ್ಧ ಮಾಡಿದಾಗ) ಶ್ರಾದ್ಧಾಂಗ ತಿಲತರ್ಪಣೇನ ಆಥವಾ ಅನೇನ (ಶ್ರಾದ್ಧ ಮಾಡದೆ ಇದ್ದಾಗ) ತಿಲತರ್ಪಣೇನ ಪಿತೃಂತರ್ಯಾಮಿ ಆಥವಾ ಪಿತ್ರಾದಿ ದ್ವಾದಶ ಪಿತೃಣಾಂ ಆಥವಾ ಪಿತ್ರಾದಿ ಸಮಸ್ತ ಪಿತೃಣಾಂತರ್ಗತ ಭಾರತೀರಮಣ ಮುಖ್ಯಪ್ರಾಣಾಂತರ್ಗತ ಶ್ರೀಮಧ್ವವಲ್ಲಭ ಜನಾರ್ಧನ ವಾಸುದೇವ ಪ್ರೀಯತಾಂ

Rarest Archives

ಪ್ರೀತೋ ವರದೋ ಭವತು, ಶ್ರೀಕೃಷ್ಣಾರ್ಪಣಮಸ್ತು ಎಂದು ಹೇಳಿ ಅಕ್ಕಿಕಾಳು ನೀರು ಅಥವಾ ಬರೀ ನೀರನ್ನು ಅರ್ಘ್ಯ ಪಾತ್ರೆಗೆ ಬಿಡಬೇಕು.

ನಂತರ ಎರಡು ಸಾರಿ ಆಚಮನ ಮಾಡಿ.

ಮಧ್ಯೆ ಮಂತ್ರ ತಂತ್ರ ಸ್ವರ ಅಕ್ಷರ ವರ್ಣ ಲೋಪ ದೋಷ ಪ್ರಾಯಶ್ಚಿತ್ತಾರ್ಥಂ ನಾಮತ್ರಯ ಮಂತ್ರ ಜಪಂ ಕರಿಷ್ಯೆ ಎಂದು ಹೇಳಿ.

ಅಚ್ಯುತಾಯ ನಮಃ, ಅನಂತಯಾ ನಮಃ ಗೋವಿಂದಾಯ ನಮಃ ಅಚ್ಯುತಾನಂತ ಗೋವಿಂದೇಭ್ಯೋ ನಮಃ (3 ಸಾರಿ) ಹೇಳಿ ಮಂತ್ರ ಮಧ್ಯೇ ಕ್ರಿಯಾ ಮಧ್ಯೇ ವಿಷ್ಣೋ ಸ್ಮರಣ ಪೂರ್ವಕಂ । ಯತ್ಕಿಂಚಿತ್ ಕ್ರಿಯತೇ ಕರ್ಮ ತತ್‌ಕರ್ಮ ಸಫಲಂ ಕುರು ॥ ಎಂದು ಹೇಳಬೇಕು. ಅನಂತರ ಪವಿತ್ರವನ್ನು ವಿಸರ್ಜನೆ ಮಾಡಿ ಆಚಮನಮಾಡಿ.

ಕಾಯೇನ ವಾಚಾ ಮನಸೇಂದ್ರಿಯೈರ್ವಾ। ಬುಧ್ಯಾತ್ಮನಾವಾ ಪ್ರಕೃತೇಃ ಸ್ವಭಾವಾತ್। ಕರೋಮಿ ಯದ್ಯತ್ ಸಕಲಂ ಪರಸ್ಮೈ ನಾರಾಯಣಾಯೇತಿ ಸಮರ್ಪಯಾಮಿ॥ ಎಂದು ಉಚ್ಚರಿಸಬೇಕು.

॥ ಶ್ರೀ ಕೃಷ್ಣಾರ್ಪಣಮಸ್ತು ॥

★ ★ ★ ★

ಮುಂದಿನ ಪುಟಗಳಲ್ಲಿ ತರ್ಪಣಕ್ಕೆ ಬರುವ ಸಮಸ್ತ ಪಿತೃಗಳನ್ನೂ ಅವರಿಗೆ ತರ್ಪಣ ಕೊಡುವಾಗ ಉಚ್ಚರಿಸಬೇಕಾದ ಮಾಹಿತಿಯನ್ನು ಕೊಟ್ಟಿದೆ. ಖಾಲಿ ಬಿಟ್ಟಿರುವ ಜಾಗದಲ್ಲಿ ಹೆಸರು ಮತ್ತು ಗೋತ್ರವನ್ನು ಭರ್ತಿಮಾಡಿಕೊಂಡರೆ ತರ್ಪಣ ಕೊಡುವಾಗ ಓದುವುದಕ್ಕೆ ಬಹಳ ಸುಲಭವಾಗುವುದು.

ಪಟ್ಟಿಯಲ್ಲಿ ಕೊಟ್ಟಿರುವ ಸಂಬಂಧೀಕರು ಯಾರಾದರೂ ಜೀವಂತರಾಗಿದ್ದಲ್ಲಿ ಅವರಿಗೆ ತರ್ಪಣ ಕೊಡಕೂಡದು. ಅಂದರೆ ಅವರ ಹೆಸರು, ಗೋತ್ರ, ರೂಪ ಇವುಗಳು ಉಚ್ಚಾರ ಮಾಡಕೂಡದು. ಅಲ್ಲಿಂದ ಪಟ್ಟಿಯಲ್ಲಿ ಮುಂದಕ್ಕೆ ಇರುವ ಪಿತೃಗಣದವರಿಗೆ ತರ್ಪಣ ಕೊಡಬೇಕು. ತಂದೆ ಜೀವಂತರಾಗಿರುವಾಗ ತರ್ಪಣ ಹುಟ್ಟುವುದಿಲ್ಲ.

Rarest Archiver

ಹೆಸರು ಓದುವಾಗ ಗಂಡಸರ ಹೆಸರಿನ ಕೊನೆಯಲ್ಲಿ " ಶರ್ಮಾಣಂ " ಎಂದೂ ಹೆಂಗಸರಿಗೆ ತರ್ಪಣ ಕೊಡವವನಿಗೆ ವಯಸ್ಸಿನಲ್ಲಿ / ವಾವೆಯಲ್ಲಿ ದೊಡ್ಡವರಾಗಿದ್ದರೆ " ದಾಂ " ಎಂದೂ ವಯಸ್ಸಿನಲ್ಲಿ / ವಾವೆಯಲ್ಲಿ ಚಿಕ್ಕವಳಾಗಿದ್ದರೆ " ನಾಮ್ನೀಂ " ಎಂದು ಸೇರಿಸಿಕೊಳ್ಳಬೇಕು. ಎಳ್ಳನ್ನು ಕೈಯಲ್ಲಿ ಹಾಕಿಕೊಂಡು, ಉದ್ಧರಣೆಯಿಂದ

ಕಲಶೋದಕವನ್ನು ಹಾಕಿಕೊಂಡು ತರ್ಪಣವನ್ನು ಕೊಡಬೇಕು, ತರ್ಪಣವನ್ನು ತಾಮ್ರದ ತಟ್ಟೆಯಲ್ಲಾಗಲೀ ಅರ್ಘ್ಯ ಪಾತ್ರೆಯಲ್ಲಾಗಲೀ ಕೊಡಬೇಕು. ತರ್ಪಣವನ್ನು ನೆಲದ ಮೇಲೆ ಕೊಡಬಾರದು.

ಋಗ್ವೇದಿಗಳು ಮೊದಲು ಹೆಸರು, ನಂತರ ಗೋತ್ರ. ತದನಂತರ ರೂಪ ಹೇಳಬೇಕು. ಯಜುರ್ವೇದಿಗಳು ಮೊದಲು ಗೋತ್ರ ಹೇಳಿ ನಂತರ ಹೆಸರು ಹೇಳಿ ತದ ನಂತರ ರೂಪ ಹೇಳಬೇಕು. ಮಿಕ್ಕಿದ್ದೆಲ್ಲಾ ಎಲ್ಲರಿಗೂ ಒಂದೇ ಕ್ರಮ.

ಜಲತರ್ಪಣ ಕ್ರಮ - ಉಪನೀತನದ ಪ್ರತಿ ವಿಪ್ರನೂ ಪ್ರತಿದಿನ ಬ್ರಹ್ಮಯಜ್ಞ ವನ್ನು ಮಾಡಬೇಕು. ಬ್ರಹ್ಮಯಜ್ಞ ಅಂಗವಾಗಿ ಸಮಸ್ತ ದೇವತೆಗಳಿಗೂ ಋಷಿಗಳಿಗೂ ಮತ್ತು ಪಿತೃದೇವತೆಗಳಿಗೂ ಜಲತರ್ಪಣ ಕೊಡಬೇಕು.

ಸ್ನಾನಾಂಗತರ್ಪಣ - ಪುಣ್ಯನದಿ, ತೀರ್ಥ, ಸಮುದ್ರ, ತಟಾಕಾದಿಗಳಲ್ಲಿ ಪುಣ್ಯ ಕ್ಷೇತ್ರಗಳಲ್ಲಿ ಸ್ನಾನಮಾಡುವಾಗ ಜಲತರ್ಪಣ ಕೊಡುವಕ್ರಮ. ಮೊದಲು ಸ್ನಾನಮಾಡಿ ಶರೀರವನ್ನು ಶುದ್ಧಿಮಾಡಿಕೊಳ್ಳಬೇಕು. ಅನಂತರ ನೀರಿನಲ್ಲಿ ಮುಳಿಗಿ ಮಲೆ ಎದ್ದು ಮೈ ಕೈ ವರಸದೆ - ಉಟ್ಟವಸ್ತ್ರವನ್ನು ಹಿಂಡದೆ ಆಚಮನ ಮಾಡಬೇಕು. ದೇಶ ಕಾಲಾದಿಗಳನ್ನು ಉಚ್ಚರಿಸಿ ಎವಂಗುಣ ವಿಶೇಷಣ ವಿಶಿಷ್ಟಾಯಾಂ ಶುಭತಿಥೌ ಅಸ್ಮಾಕಂ ಸಕುಟುಂಬನಾಂ ಕ್ಷೇಮಸ್ಥೈರ್ಯ ವಿಜಯ ವೀರ್ಯ ಆಯರಾರೋಗ್ಯದಿ ಸಿದ್ಧ್ಯರ್ಥಂ ಸಮಸ್ತ ದುರಿತ ಕ್ಷಯ ದ್ವಾರ ಶಾಶ್ವತ ವಿಷ್ಣುಲೋಕ ಪ್ರಾಪ್ತ್ಯರ್ಥಂ ಅಸ್ಮದ್ ಗುರ್ವಂತಗತ ಭಾರತೀ ಪತಿ ಶ್ರೀಲಕ್ಷ್ಮೀ ನಾರಾಯಣ ಅಭಿನ್ನ ಕ್ಷೇತಾಭಿಮಾನಿ ದೇವತ (ಇಲ್ಲಿ ಆಕ್ಷೇತದ ದೇವರ ಹೆಸರು ಮತ್ತು) ತೀರ್ಥಾಭಿಮಾನಿ ದೇವತಾ ಪ್ರೀತ್ಯರ್ಥಂ) - ಪುಣ್ಯನದೀ ಸ್ನಾನಂ ಕರಿಷ್ಯೆ ಎಂದು ಹೇಳಿ ನೀರು ಬೀಡಬೇಕು.

Rarest Archiver

ಅನಂತರ ಸೂರ್ಯನಿಗೆ ನದೀ ದೇವತೆಗೆ ಕ್ಷೇತ್ರ ದೇವತೆಗೆ ಅರ್ಘ್ಯವನ್ನು ಕೊಡಬೇಕು ಆದಂತರ ಸರ್ವಾನ್ ದೇವಾನ್ ಇದಂ ಅರ್ಘ್ಯಂ - ದೇವ ಪತ್ನಿಂ ಇದಂ ಅರ್ಘ್ಯಂ ಎಂದು ಸಮ ದೇವತೆಗಳಿಗೆ ಅರ್ಘ್ಯವನ್ನು ಕೊಡಬೇಕು.

ಅನಂತರ ಭೂಋಷೀಂ ತರ್ಪಯಾಮಿ ಭುವಋಷೀತರ್ಪಯಾಮಿ ಋಷೀಪತ್ನೀಂ ತರ್ಪಯಾಮಿ ಋಷಿಪುತ್ರಂ ತರ್ಪಯಾಮಿ ಭುವಋಷೀತರ್ಪಯಾಮಿ ಋಷೀಪತ್ನೀಂ ತರ್ಪಯಾಮಿ ಮತ್ತು ಋಷೀ ಪುತ್ರಾನಾಂ ತರ್ಪಯಾಮಿ ಸುನಃ ಋಷೀಂ ತರ್ಪಯಾಮಿ ಋಷಿಪತ್ನಿಂ ತರ್ಪಯಾಮಿ ಋಷಿಪುತ್ರಂತರ್ಪಯಾಮಿ ಎಂದು ಋಷಿಗಳಿಗೆ ತರ್ಪಣ ಕೊಡಬೇಕು ಅನಂತರ ಸಮಸ್ತ ಪಿತೃಗಳಿಗೂ ತರ್ಪಣ ಕೊಡಬೇಕು. ತರ್ಪಣ ನಂತರ ಈ ಮಂತ್ರವನ್ನು ಹೇಳಬೇಕು. ಆಬ್ರಹ್ಮಸ್ತಂಭಪರ್ಯಂತ ದೇವ ಋಷಿ ಪಿತೃ ಮಾನವಾಃ ತೃಪ್ಯಂತು ಪಿತರೇಸ್ಸರ್ವೇ ಮಾತೃ ಮಾತಾ ಮಹಾದಯಃ ಆತೀತ ಕುಲ ಕೊಟೀನಾಂ ಸ್ತಪದ್ವೀಪ ನಿವಾಸಿನಾಂ ಆಬ್ರಹ್ಮ ಭುವನಾಲ್ಲೋಕೆ ಇದುಮಸ್ತು ಜಲತರ್ಪಣಾನಂ ಎಂದು ಹೇಳಿ ಏಕೇಚ ಅಸ್ಮತ್ ಕುಲೇಜಾತಾ। ಅಪುತಾ ಗೋತ್ರಜಾಮೃತ ತೇಗೃಹ್ಣಂತು ಮಯಾದತ್ತಂ ಶಿಖಾ ನಿಷ್ಪೀಡ ನೋದಕಂ ಎಂದು ಹೇಳಿ ಶಿಖೆಯನ್ನು ಹಿಂಡಿ ಆನಿರನ್ನು ಬಿಡಬೇಕು ಇಷ್ಟಾಪ ಮೇಲೆ ಯಸ್ಯಶೃತ್ಯಾಚ ನಾಮೊತ್ತ್ಯಾಸ ತಪೋಜಲ ತರ್ಪಣ ಕ್ರಿಯಾದಿಷು ನ್ಯೂನಂ ಸಪೂರ್ಣಾ ತಾಂಯಾಂತಿ ಸದ್ಯೂದಂದೆ ತಮಚ್ಯುತಂ ಮಂತ್ರ ಹೀನಂ ಕ್ರೀಯಾ ಹೀನಂ, ಭಕ್ತಿ ಹೀನಂ, ಜನಾರ್ದನ ಯತ್ಪತಂತು ಮಯಾದೇವ ಪರಿಪೂರ್ಣ ತದಸ್ತುಮೇ ಎಂದು ಹೇಳಿ - ಅಸೇನ ಪುಣ್ಯನದೀ ಸ್ನಾನಾಂಗ ಅಥವಾ ಕ್ಷೇತ್ರ ಸ್ನಾನಾಂಗ ಜಲತರ್ಪರ್ಣಣೇನ ಭಾರತೀ ರಮಣ ಮುಖ್ಯ ಪ್ರಾಣಾತರ್ಕ ಮಧ್ವವಲ್ಲಬ ಜನಾರ್ದನ ಆಭಿನ್ನು ಅಸ್ಮತ್ ಕುಲದೇವತ (ಶ್ರೀ ಲಕ್ಷ್ಮೀವೆಂಕಟೇಶ ಅಥವಾ ನರಸಿಂಹ ಇತ್ಯಾದಿ ದೇವ ಹೆಸರು ಹೇಳಿ) ಪ್ರೀತಾಂ ಪ್ರಿತೋ ವರದೋಭವತು ಎಂದ ನೀರನ್ನು ಬಿಡಬೇಕು. ಮಧ್ಯ ಮಂತ್ರ ತಂತ್ರ ಸ್ವರ ವರ್ಣ ದೋಷ ಪ್ರಾಯಶ್ಚಿತ್ತಾರ್ಥಂ ನಾಮತ್ರಯ ಮಂತ್ರ ಜಪಂ ಕರಿಷೇ ಆಚ್ಯುತಾಯನಮಃ ಅನಂತಾಯನಮಃ ಆಚ್ಯುತಾನಂತ ಗೋವಿಂದಾನಮಃ

ಕಾಯೇನವಾಚಾಮನಸ್ಸೇಂದ್ರಿಯೈರ್ವಾ ಬುಧ್ಯಾತ್ಮನಾಮ ಪಕೃತೇಸ್ವಭಾವ ಕರೋಮಿ ಯದ್ಯತ್ ಸಕಲಂ ಪರಸ್ಮೈ ನಾರಾಯಣಾಯೇತಿ ಸಮರ್ಪ ಯಾಮಿ॥

Rarest Archives

ತರ್ಪಣಕ್ಕೆ ಬರುವ ಸಮಸ್ತ ಪಿತೃಗಳು

1. ಅದೌ ಪಿತಾ ತಥಾ ಮಾತಾ।ಸ ಪತ್ನಿ ಜನನೀ ತಥಾ।
ಮಾತಾಮಹಾಸ್ಸಪತ್ನೀಕಾ।। ಆತ್ಮಪತ್ನೀತ್ವನಂತರಂ

2. ಸುತಭ್ರಾತೃ ಪಿತ್ರವ್ಯಾಚ್ಚ । ಮಾತುಲಾ ಸಹಭಾರ್ಯಕಾಃ
ದುಹಿತಾ ಭಗನೀಚ್ಚೈವ। ದೌಹಿತ್ರೋಭಾಗಿನೇಯಕಾಃ

3.. ಪಿತೃಶ್ವಸಾ ಮಾತೃಘಸಾ । ಜಾಮಾತಾ ಭಾವುಕ ಸ್ನುಷಾ।
ಶ್ವಶುರ ಸ್ಯಾಲಕಶ್ಚೈವ। ಶಿಷ್ಯಾಪ್ತಾ ಗುರು ಬಾಂಧವಾಃ
(ಪಾಠಂತರ) ಸ್ವಾಮಿನೋ ಗುರು ರಿಥ್ವಿನಂ।।

ತರ್ಪಣ ಕೊಡುವವರಿಗೆ ಬಾಂಧವ್ಯ	ಹೆಸರು ....ಶರ್ಮ	..........ಗೋತ್ರ	ರೂಪ	
ಅಸ್ಮತ್ ಪಿತರಂ	....	....		ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ತಂದೆ	.....ಶರ್ಮಾಣಂ	.....ಗೋತ್ರಂ	ವಸು ರೂಪಂ	
ಅಸ್ಮತ್ ಪಿತಾಮಹಂ	....	....		ರೂದ್ರರೂಪಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸಂಕರ್ಷಣಂ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
(ತಂದೆಯ ತಂದೆ)	.....ಶರ್ಮಾಣಂ	....ಗೋತ್ರಂ	ರೂದ್ರ ರೂಪಂ	

Rarest Archive

ತರ್ಪಣ ಕೊಡುವವರಿಗೆ ಬಾಂಧವ್ಯ	ಹೆಸರು ....ಶರ್ಮ	..........ಗೋತ್ರ	ರೂಪ	
ಅಸ್ಮತ್ ಪ್ರಪಿತಾಮಹಂ (ತಂದೆಯ ತಂದೆಯ ತಂದೆ)	....ಶರ್ಮಾಣಂ	....ಗೋತ್ರಂ	ಆದಿತ್ಯರೂಪಂ	ವಾಸುದೇವಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ಅಸ್ಮತ್ ಮಾತರಂ (ತಾಯಿ)	....ದಾಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ಅಸ್ಮತ್ ಪಿತಾಮಹೀಂ (ತಂದೆಯ ತಾಯಿ)	....ದಾಂ	....ಗೋತ್ರಂ	ರೂದ್ರ ರೂಪಂ	ಸಂಕರ್ಷಣಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.

ಅಸ್ಮತ್ ಪ್ರಪಿತಾಮಹಂ (ತಂದೆಯ ತಂದೆಯ ತಾಯಿ)	....ದಾಂ	....ಗೋತ್ರಾಂ	ಅದಿತಿರೂಪಂ	ವಾಸುದೇವಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ಅಸ್ಮತ್ ಸಾಪತ್ನಿ ಜನನೀ (ತಂದೆಯ ಮತ್ತೊಬ್ಬ ಹೆಂಡತಿ ಇದ್ದರೆ)	....ದಾಂ	....ಗೋತ್ರಾಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ಅಸ್ಮತ್ ಮಾತಾಮಹಂ (ತಾಯಿಯ ತಂದೆ)	....ಶರ್ಮಾಣಂ	....ಗೋತ್ರಾಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ಅಸ್ಮತ್ ಮಾತಾ ಪಿತಾಮಹಂ (ತಾಯಿಯ ತಂದೆಯ ತಂದೆ)	....ಶರ್ಮಾಣಂ	....ಗೋತ್ರಾಂ	ರುದ್ರರೂಪಂ	ಸಂಕರ್ಷಣಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.

Rarest Archiver

ತರ್ಪಣ ಕೊಡುವವರಿಗೆ ಬಾಂಧವ್ಯ	ಹೆಸರು ....ಶರ್ಮ	..........ಗೋತ್ರ	ರೂಪ	
ಅಸ್ಮತ್ ಮಾತಃ ಪ್ರಪಿತಾಮಹಂ	....	....		ಆದಿತ್ಯರೂಪಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ವಾಸುದೇವಂ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪ ಯಾಮಿ.
(ತಾಯಿಯ ತಂದೆಯ (ತಂದೆಯ ತಂದೆ)	.....ಶರ್ಮಾಣಂ	.....ಗೋತ್ರಂ	ಆದಿತ್ಯರೂಪಂ	
ಅಸ್ಮತ್ ಮಾತಾಮಹೀಂ	....	....		ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪ ಯಾಮಿ.
(ತಾಯಿಯ ತಾಯಿ)	.............ದಾಂ	.......ಗೋತ್ರಂ	ವಸುರೂಪಂ	
ಅಸ್ಮತ್ ಮಾತಃ ಪಿತಾಮಹೀಂ	....	....		ಸಂಕರ್ಷಣಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪ ಯಾಮಿ.
(ತಾಯಿಯ ತಂದೆಯ ತಾಯಿ)	.............ದಾಂ	.......ಗೋತ್ರಂ	ರೂದ್ರ ರೂಪಂ	

Rarest Archiver

ಅಸ್ಮತ್ ಮಾತಾಃ ಪ್ರಪಿತಾಮಹೀಂ (ತಾಯಿಯ ತಂದೆಯ ತಂದೆಯ ತಾಯಿ)	....ದಾಂ	....ಗೋತ್ರಂ	ಅದಿತ್ಯರೂಪಂ	ವಾಸುದೇವಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪ ಯಾಮಿ.

ಇವರುಗಳು ದರ್ಶಶ್ರಾದ್ಧದಲ್ಲಿ ತರ್ಪಣಕ್ಕೆ ಬರುತ್ತಾರೆ. ಇಲ್ಲಿಂದ ಮುಂದಕ್ಕೆ ತರ್ಪಣಕ್ಕೆ ಬರುವವರೆಲ್ಲರೂ ವಸುರೂಪದವರು

ಅಸ್ಮತ್ ಪತೀಂ (ತನ್ನ ಹೆಂಡತಿ)	.... ನಾಮ್ನೀಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ವಾಸುದೇವಂ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪ ಯಾಮಿ.
ಅಸ್ಮತ್ ಸುತಂ (ತನ್ನ ಮಗ ಸಹೋದರನ ಮಗ)	....ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪ ಯಾಮಿ.

Rarest Archiver

ತರ್ಪಣ ಕೊಡುವವರಿಗೆ ಬಾಂಧವ್ಯ	ಹೆಸರು ....ಶರ್ಮ	..........ಗೋತ್ರ	ರೂಪ	
ಅಸ್ಮತ್ ಭ್ರಾತರಂ (ಅಣ್ಣ ಮತ್ತು (ತಮ್ಮಂದಿರು)	....ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ತತ್ ಪತ್ನೀಂ (ಅವರ ಹೆಂಡತಿ)	....ದಾಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ತತ್ ಪುತ್ರಂ (ಅವರ ಮಗ)	....ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.

Rarest Archiver

ಅಸ್ಮತ್ ಪಿತೃವ್ಯಂ (ದೊಡ್ಡಪ್ಪ-ಚಿಕ್ಕಪ್ಪ)	....ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತಪಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ತತ್ ಪತ್ನೀಂ (ಅವರ ಹೆಂಡತಿ)	....ದಾಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ತತ್ ಪುತ್ರಂ (ಅವರ ಮಗ)	....ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ಅಸ್ಮತ್ ಮಾತುಲಂ (ಸೋದರ ಮಾವ)	....ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.

Rarest Archiver

ತರ್ಪಣ ಕೊಡುವವರಿಗೆ ಬಾಂಧವ್ಯ	ಹೆಸರು ....ಶರ್ಮ	...........ಗೋತ್ರ	ರೂಪ	
ತನ್ ಪತ್ನೀಂ (ಅವರ ಹೆಂಡತಿ)	....ದಾಂ	....ಗೋತ್ರಾಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ತತ್ಪುತ್ರಂ (ಅವರ ಮಗ)	....ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ಅಸ್ಮತ್ ದುಹಿತರಂ (ಮಗಳು)	....ನಾಮ್ನೀ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.

Rarest Archive

ತದ್ಭರ್ತಾರಂ ಜಾಮಾತಾ (ಅಕೆಯ ಗಂಡ)	....ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ತತ್ ಪುತ್ರಂ (ದೌಹಿತ್ರಂ)	....ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ಅಸ್ಮತ್ ಭಗಿನೀಂ (ಅಕ್ಕ ತಂಗಿಯರು)	....ದಾಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ತದ್ಭರ್ತಾರಂ (ಅವರ ಗಂಡ)	....ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.

Rarest Archiver

ತರ್ಪಣ ಕೊಡುವವರಿಗೆ ಬಾಂಧವ್ಯ	ಹೆಸರು ....ಶರ್ಮ	..........ಗೋತ್ರ	ರೂಪ	
ತ್ಪುತ್ರಂ (ಭಾಗಿನೇಯಂ)	....ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ಅಸ್ಮತ್ ಪಿತೃಷ್ವಸಾರಂ (ಪಿತೃ ಭಗಿನೀಂ) (ತಂದೆಯ ಅಕ್ಕ ತಂಗಿಯರು)	....ದಾಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ತತ್ಭರ್ತಾರಂ (ಅವರ ಗಂಡ)	....ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.

Rarest Archiver

ತತ್ಪುತ್ರಂ (ಅವರ ಮಗ)	....ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ಅಸ್ಮತ್ ಮಾತೃಷ್ವಸಾರಂ (ಮಾತೃ ಭಗಿನೀಂ ತಾಯಿಯ ಅಕ್ಕತಂಗಿಯರು	....ದಾಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ಅಸ್ಮತ್ ಭಗಿನೀಂ (ಅಕ್ಕ ತಂಗಿಯರು)	....ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ತದ್ಭರ್ತಾರಂ (ಅವರ ಗಂಡ)	....ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.

Rarest Archiver

ತರ್ಪಣ ಕೊಡುವವರಿಗೆ ಬಾಂಧವ್ಯ	ಹೆಸರು ....ಶರ್ಮ	..........ಗೋತ್ರ	ರೂಪ	
ಅಸ್ಮತ್ ಸ್ನುಷಾಂ (ಸೊಸೆ)	.... .ನಾಮ್ನೀಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ಅಸ್ಮತ್ ಶ್ವಶುರಂ (ಹೆಣ್ಣು ಕೊಟ್ಟು ಮಾವ)	....ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ತತ್ಪತ್ನೀಂ (ಅವರ ಹೆಂಡತಿ ಅಂದರೆ (ಅತ್ತೆ)	....ದಾಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.

Rarest Archiver

ತದ್ಪುತ್ರಂ (ಅವರ ಮಗ)	....ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ಸ್ವಾಮಿ-ಸಖಾ-ಗುರು-ಆಚಾರ್ಯ ಇವರುಗಳೆಲ್ಲಾ ಬೇರೆ ಯಾರೂ ಅಧಿಕಾರಿಗಳು ಇಲ್ಲದಿದ್ದಲ್ಲಿ ತರ್ಪಣವನ್ನು ತಂದೆಯ ಹೆಸರಿನಲ್ಲಿ ಕೊಡಬೇಕು.				
ಅಸ್ಮತ್ ಸ್ವಾಮಿನಂ (ಯಜಮಾನ)	....ಶರ್ಮಾಣಂ	.... ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ತತ್ಪತ್ನೀಂ (ಅವರ ಹೆಂಡತಿ)	....ದಾಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ಅಸ್ಮತ್ ಸಖಾಯಂ (ಸ್ನೇಹಿತ)	....ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.

Rarest Archiver

ತರ್ಪಣ ಕೊಡುವವರಿಗೆ ಬಾಂಧವ್ಯ	ಹೆಸರು ....ಶರ್ಮ	..........ಗೋತ್ರ	ರೂಪ	
ಅಸ್ಮತ್ ಗುರುಂ (ಗಾಯತ್ರಿ ಮಂತ್ರ ಉಪದೇಶಿಸಿದ ಗುರು)	....ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ತತ್ಪತ್ನೀಂ (ಅವರ ಹೆಂಡತಿ)	....ದಾಯೈ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.
ಅಸ್ಮತ್ ಆಚಾರ್ಯಂ (ಸಚ್ಛಾಸ್ತ್ರ ಉಪದೇಶಿಸಿದ ಗುರು)	.... ಶರ್ಮಾಣಂ	....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪಯಾಮಿ.

Rarest Archive

ತತ್ಪತ್ನೀಂ (ಅವರ ಹೆಂಡತಿ)	………………… ದಾಯೈ	………………… .....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಸ್ವಧಾ ನಮಸ್ತರ್ಪಯಾಮಿ ತರ್ಪಯಾಮಿ ತರ್ಪ ಯಾಮಿ.
ಅಸ್ಮತ್ ಶಿಷ್ಯಂ (ತಾನು ಉಪದೇಶ ಮಾಡಿದ ಶಿಷ್ಯ (ಸಪತ್ನೀಕಂ)	………………… .....ಶರ್ಮಾಣಂ	………………… ....ಗೋತ್ರಂ	ವಸುರೂಪಂ	ಪ್ರದ್ಯುಮ್ನಂ ತದಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ವಸುರೂಪಂಪ್ರದ್ಯುಮ್ನಂ ಸ್ವಧಾ ನಮಸ್ತರ್ಪ ಯಾಮಿ ತರ್ಪಯಾಮಿ ತರ್ಪ ಯಾಮಿ.

ನಂತರ ಜನಿವಾರವನ್ನು ವನಮಾಲೆಯಾಗಿ ಹಾಕಿಕೊಂಡು ಉಳಿದ ಎಳ್ಳುನೀರನ್ನು ಈ ಕೆಳಗಿನ ಎರಡು ಮಂತ್ರ ಹೇಳಿ ತರ್ಪಣ ಕೊಡುವುದು.

ಅಬ್ರಹ್ಮಸ್ತಂಬ ಪರ್ಯಂತಂ ದೇವರ್ಷಿ ಪಿತೃ ಮಾನವಾಃ ಆತೀತ ಕುಲಕೋಟೀನಾಂ ಸಪ್ತದ್ವೀಪ ನಿವಾಸಿನಾಂ ।
ತೃಪ್ಯಂತು ಪಿತರಸ್ಸರ್ವೇ ಮಾತೃ ಮಾತಾ ಮಹಾದಯಃ ॥೧॥ ಆಬ್ರಹ್ಮ ಭುವನಾಲ್ಲೋಕಂ ಇದಮಸ್ತು ತಿಲೋದಕಂ ॥೨॥

ಯಜ್ಞೋಪವೀತವನ್ನು ಮಾಲಾಕಾರವಾಗಿ ಹಾಕಿಕೊಂಡು ಕೆಳಗಿನ ಮಂತ್ರವನ್ನು ಹೇಳಿ ಬ್ರಹ್ಮಗಂಟನ್ನು ನೀರಿನಲ್ಲಿ ಅದ್ದಿ ಕಣ್ಣುಗಳಿಗೆ ಒತ್ತಿಕೊಳ್ಳಬೇಕು.

ಯೇ ಕೇ ಚಾಸ್ಮತ್ಕುಲೇ ಜಾತಾ ಅಪುತ್ರಾ ಗೋತ್ರಿಣೋ ಮೃತಾಃ । ತೇಗೃಹ್ಣಂತು ಮಯಾದತ್ತಂ ಸೂತ್ರ ನಿಷ್ಪೀಡನೋದಕಂ ॥

ನಂತರ ಪೂರ್ವ ದಿಕ್ಕಿಗೆ ತಿರುಗಿಕೊಂಡು ಜನಿವಾರವನ್ನು ಸವ್ಯಕ್ಕೆ ಹಾಕಿಕೊಳ್ಳಬೇಕು.

೧. ಯಸ್ಯಸ್ಮೃತ್ಯಾಚ ನಾಮೋಕ್ತ್ಯಾ ತಪಃ ತರ್ಪಣಂ ಕ್ರಿಯಾದಿಷು ೩. ಮಂತ್ರಹೀನಂ ಕ್ರೀಯಾಹೀನಂ ಭಕ್ತಿಹೀನಂ ಜನಾರ್ಧನ ।
೨. ನ್ಯೂನಂ ಸಂಪೂರ್ಣತಾಂ ಯಾತಿ ಸದ್ಯೋ ವಂದೇ ತಮಚ್ಯುತಂ ॥ ೪. ಯತ್ಕೃತಂತು ಮಯಾದೇವ ಪರಿಪೂರ್ಣಂ ತದಸ್ತುಮೇ ॥

Rarest Archive

ಅನೇನ ತಿಲತರ್ಪಣೇನ ಪಿತೃರ್ಂತರ್ಯಾಮಿ (ಅಥವಾ) ದ್ವಾದಶ ಪಿತೃಣಾಂ ಅಂತರ್ಯಾಮಿ (ಅಥವಾ) ಪಿತ್ರಾದಿ ಸಮಸ್ತ ಪಿತೃಣಾಂ ಅಂತರ್ಯಾಮಿ ಭಾರತೀ ರಮಣ ಮುಖ್ಯ ಪ್ರಾಣಾಂತರ್ಗತ ಶ್ರೀಮಧ್ವವಲ್ಲಭ ಜನಾರ್ಧನ ವಾಸುದೇವ ಪ್ರಿಯತಾಂ ಪ್ರೀತೋ ವರದೋ ಭವತು। ಶ್ರೀಕೃಷ್ಣಾರ್ಪಣಮಸ್ತು ॥ ಮಧ್ಯೆ ಮಂತ್ರ ತಂತ್ರ ಸ್ವರ ವರ್ಣ ಲೋಪ ದೋಷ ಪ್ರಾಯಶ್ಚಿತ್ತಾರ್ಥಂ ನಾಮ ತ್ರಯ ಮಂತ್ರ ಜಪಂ ಕರಿಷ್ಯೆ

3. ಸಾರಿ ಅಚ್ಯುತಾಯ ನಮಃ ಅನಂತಾಯ ನಮಃ ಗೋವಿಂದಾಯ ನಮಃ

1. ಸಾರಿ ಅಚ್ಯುತಾನಂತ ಗೋವಿಂದೇಭ್ಯೋನಮಃ ಅಂತಹೇಳಿ ತಿರುಗಿ ಆಚಮನ ಮಾಡಬೇಕು

ಪವಿತ್ರ ವಿಸರ್ಜನೆ ಮಾಡಿ ನಂತರ ಆಚಮನ ಮಾಡಬೇಕು.

ಕಾಯೇನವಾಚಾ ಮನಸೇಂದ್ರ ಯೈರ್ವಾ ಬುಧ್ಯಾತ್ಮನಾಮಾ ಪ್ರಕೃತೇಃ ಸ್ವಭಾವಾತ್ ಕರೋಮಿ ಯದ್ಯತ್ ಸಕಲಂ ಪರಸ್ಮೈ ನಾರಾಯಣಾಯೇತಿ ಸಮರ್ಪಯಾಮಿ ।

॥ ಶ್ರೀ ಕೃಷ್ಣಾರ್ಪಣಮಸ್ತು ॥

ಭೀಷ್ಮ ತರ್ಪಣ

ಮಾಘ ಶುಕ್ಲ ಅಷ್ಟಮಿಯನ್ನು ಭೀಷ್ಮಾಷ್ಟಮಿ ಎಂದು ಕರೆಯುತ್ತಾರೆ

ಅಷ್ಟವಸುಗಳ ಅಂಶದಿಂದ ಶಂತನ ಚಕ್ರವರ್ತಿ ಮತ್ತು ಗಂಗಾದೇವಿಯರ ಪುತ್ರನಾಗಿ ಜನಿಸಿ, ದೇವವ್ರತನೆಂಬುವ ಹೆಸರನ್ನು ಹೊಂದಿದ್ದನು. ಈತನು ಚಕ್ರವರ್ತಿಯ ಜ್ಯೇಷ್ಠ ಪುತ್ರನಾಗಿ ಜನಿಸಿದ್ದಾಗ್ಯೂ ತಂದೆಯ ಸುಖ ಸಂತೋಷಕ್ಕಾಗಿ ಅಷ್ಟೈಶ್ವರ್ಯಯುಕ್ತವಾದ ರಾಜ ಭೋಗಗಳನ್ನು ತ್ಯಜಿಸಿ ಮಹಾಭೀಷ್ಮ (ಕಠಿಣವಾದ) ಪ್ರತಿಜ್ಞೆ ಮಾಡಿದ್ದರಿಂದ ಭೀಷ್ಮನೆಂಬುವ ಹೆಸರಿಂದಲೇ ಜಗತ್ಪ್ರಸಿದ್ಧನಾದನು. ಪರಶುರಾಮದೇವರಲ್ಲಿ ಧನುರ್ವಿದ್ಯೆಯನ್ನು ಕಲಿತು ಮಹಾ ಪರಾಕ್ರಮಶಾಲಿಯಾದನು. ಕುರುಕ್ಷೇತ್ರ ಯುದ್ಧದಲ್ಲಿ ಕೌರವ ಸೇನಾಪತಿಯಾಗಿ 11 ದಿನಗಳು ಯುದ್ಧ ಮಾಡಿದ ಮಹಾ ವೀರ.

Rarest Archiver

ಈತನು ಅಜನ್ಮ ಬ್ರಹ್ಮಚಾರಿ. ತನ್ನ ಪ್ರತಿಜ್ಞೆಗೆ ಅನುಸಾರವಾಗಿ ಯುದ್ಧದಲ್ಲಿ ಶಿಖಂಡಿ ಎದುರು ನಿಂತಾಗ ಅಸ್ತ್ರ ಸನ್ಯಾಸವನ್ನು ಮಾಡಿ ದೇಹತ್ಯಾಗಮಾಡಲು ದಕ್ಷಿಣಾಯನ ಕಾಲವಾದ್ದರಿಂದ ಉತ್ತರಾಯಣ ಬರುವವರೆಗೆ ಶರತಲ್ಪಗತನಾಗಿದ್ದು ಉತ್ತರಾಯಣದಲ್ಲಿ ಮಾಘ ಶುಕ್ಲ ಅಷ್ಟಮಿಯಂದು ದೇಹಪರಿತ್ಯಾಗ ಮಾಡಿದ ಮಹಾಮಹಿಮನೀತನು. ಅಷ್ಟವಸುಗಳ ಪ್ರೀತ್ಯರ್ಥವಾಗಿ ಆದಿನ ಅಂದರೆ ಬೀಷ್ಮಾಷ್ಟಮಿಯಂದು ಜಲ ತರ್ಪಣ ಕೊಡಬೇಕು. ಇದು ದೇವ ತರ್ಪಣದ ಪದ್ಧತಿಯಲ್ಲಿ ಕೊಡಬೇಕು. ಆಚಮನ ಮಾಡಿ ದೇಶಕಾಲಾದಿಗಳನ್ನು ಉಚ್ಚರಿಸಿ ಭೀಷ್ಮಾಷ್ಟಮಿ ಮಹಾ ಪುಣ್ಯಕಾಲ ಪ್ರಯುಕ್ತ ದೇವವ್ರತಾಭಿನ್ನ ಭೀಷ್ಮ ಅಂತರ್ಗತ ಅಷ್ಟವಸು ಅಂತರ್ಗತ ಭಾರತೀರಮಣ ಮುಖ್ಯ ಪ್ರಾಣಾಂತರ್ಗತ ಶ್ರೀ ಮಹಾ ವಿಷ್ಣು ಪ್ರೇರಣಾಯ ಶ್ರೀ ಮಹಾವಿಷ್ಣು ಪ್ರೀತ್ಯರ್ಥಂ ಭೀಷ್ಣ ತರ್ಪಣಂ ಕರಿಷ್ಯೆ ಎಂದು ಸಂಕಲ್ಪ ಮಾಡಿ ಈ ಶ್ಲೋಕವನ್ನು ಹೇಳಿ ಭೀಷ್ಮಂ ತರ್ಪಯಾಮಿ ಎಂದು ಹೇಳಿ ಎರಡು ಸಲ ಜಲ ತರ್ಪಣವನ್ನು ಕೊಡಬೇಕು

ಗಂಗಾ ಪುತ್ರಾಯ ಭೀಷ್ಮಾಯ ಆಜನ್ಮ ಬ್ರಹ್ಮಚಾರಿಣೇ।
ಅಪುತ್ರಾಯ ಜಲಂದದ್ಮ । ನಮೋ ಭೀಷ್ಮಾಯ ಶರ್ಮಣೇ॥

ಈತನಿಗೆ ತರ್ಪಣವನ್ನು ಜೀವತ್ಪಿತೃಗಳು (ತಂದೆ ತಾಯಿ ಇರುವವರು) ಕೊಡಬಹುದು, ಈ ಪುಣ್ಯದಿನ ತರ್ಪಣ ಕೊಡುವುದರಿಂದ ವಸುಗಳು ಸಂತುಷ್ಟರಾಗಿ ನಮಗೆ ಮಂಗಳವನ್ನು ಉಂಟುಮಾಡುವರು, ಇದು ಜಲ ತರ್ಪಣ ಮಾತ್ರ. ತರ್ಪಣ ಕೊಡುವಾಗ ಯಜ್ಞೋಪವೀತವನ್ನು ಸವ್ಯದಲ್ಲಿರಬೇಕು ತರ್ಪಣ ನಂತರ ಯಸ್ಯಸ್ಮೃತ್ಯಾಚ ಮಂತ್ರ ಹೇಳಿ ತರ್ಪಣದ ಫಲವನ್ನು ಶ್ರೀಹರಿಗೆ ಸಮರ್ಪಣೇ ಮಾಡಬೇಕು. ಅನಂತರ ಮಧ್ಯೆ ಮಂತ್ರ ತಂತ್ರ ಸ್ವರಾಕ್ಷರವರ್ಣ ಲೋಪ ದೋಷ ಪ್ರಾಯಶ್ಚಿತ್ತಾರ್ಥಂ ನಾಮ ತ್ರಯ ಮಂತ್ರ ಜಪಂ ಕರಿಷ್ಯೆ ಎಂದು ಹೇಳಿ ಅಚ್ಯುತಾಯ ನಮಃ ಅನಂತಾಯ ನಮಃ ಅಚ್ಯುತಾನಂತ ಗೋವಿಂದೇಭ್ಯೋ ನಮಃ ಎಂದು ಮೂರು ಸಲ ಉಚ್ಚರಿಸಬೇಕು, ಕೈಯಲ್ಲಿ ಮಂತ್ರಾಕ್ಷತೆ ಹಾಕಿ ಕೊಂಡು ತುಲಸೀದಳವನ್ನು ಇಟ್ಟುಕೊಂಡು ನೀರನ್ನು ಬಿಡಬೇಕು. ಇದು ತರ್ಪಣ ವಿಧಾನ.

ತರ್ಪಣವನ್ನು ಕೊಡುವಾಗ ಅನುಸರಿಸಬೇಕಾದ ನಿಯಮಗಳು

ಕರ್ತನು ಶಿರ ಸ್ನಾನ ಮಾಡಬೇಕು. ಕಂಠಸ್ನಾನ ಮಾಡಿ ತದನಂತರ ಕೊಡಬಾರದು

Rarest Archiver

ಮೊದಲು ಸ್ನಾನ ಮಾಡಿ ಅನಂತರ ಆಚಮನ ಮಾಡಿ ತದನಂತರ ಮಡಿ ನೀರಿನಿಂದ ಸ್ನಾನ ಮಾಡಬೇಕು. ಸ್ನಾನದ ನಂತರ ಮಡಿ ವಸ್ತ್ರವನ್ನು ಉಡಬೇಕು. ಒದ್ದೆ ವಸ್ತ್ರ ಮಡಿಗೆ ಬರುವುದಿಲ್ಲ, ಅನಿವಾರ್ಯ ಕಾರಣದಿಂದ ಕಾಲಾನುಗುಣವಾಗಿ ಒದ್ದೆ ವಸ್ತ್ರ ಉಡಬೇಕಾದಾಗ ಆ ಅಸ್ತ್ರವನ್ನು 7 ಸಲ ಜಾಡಿಸಿದರೆ ಅದು ಒಣವಸ್ತ್ರ ಸಮಾನವಾಗುತ್ತದೆ, ಅದನ್ನು ಉಟ್ಟು ಸಂಧ್ಯಾವಂದನೆ ಗಾಯತ್ರೀ ಜಪಾದಿಗಳನ್ನು ಮಾಡಿ ತರ್ಪಣವನ್ನು ಕೊಡಬೇಕು. ತರ್ಪಣ ಕೊಡುವ ವ್ಯಕ್ತಿ ಆ ದಿನ ಆಯುಷ್ಕರ್ಮವನ್ನು ಮಾಡಿಸಿಕೊಳ್ಳಬಾರದು. ತರ್ಪಣ ಕೊಟ್ಟ ದಿನ ಏಕ ಭುಕ್ತ, ಏಕಶಯ್ಯ . ನಿಷಿದ್ಧ ಪದಾರ್ಥಗಳನ್ನು ಸೇವಿಸಬಾರದು. ಧೂಮಪಾನ ಮಾಡಬಾರದು. ವಿಧಿ ಇಲ್ಲದೆ ಹೋದಾಗ ರಾತ್ರಿ ಹಾಲು ಹಣ್ಣು ಸೇವಿಸಬಹುದು, ಹೋಟೆಲು ತಿಂಡಿಗಳನ್ನು ಸೇವಿಸಬಾರದು. ಮನೆಯಲ್ಲಿಯೇ ಊಟ ಮಾಡಬೇಕು, ಉದ್ಯೋಗವಶಾತ್ ಮಧ್ಯಾಹ್ನ ಮಡಿಯಲ್ಲಿ ಊಟ ಮಾಡಲು ಅನುಕೂಲವಿಲ್ಲದ ಪಕ್ಷದಲ್ಲಿ ಹಗಲು ಹಾಲು ಹಣ್ಣುಗಳನ್ನು ಸೇವಿಸಿ ರಾತ್ರಿ ಮನೆಯಲ್ಲಿ ಮಡಿಯಲ್ಲಿ ಊಟ ಮಾಡಬಹುದು.

ಮಾತಾ ಪಿತೃಗಳ ಮಾಸಿಕ ಶ್ರಾದ್ಧ ಕಾಲದಲ್ಲಿ ತರ್ಪಣ ಕೊಡಬೇಕು, ಅದು ಶ್ರಾದ್ಧಂಗ ತರ್ಪಣ ಪರೇಹನಿಯಲ್ಲ. ಮುತ್ತೈದೆ ತಿಥಿಯಂದು ತರ್ಪಣಕ್ಕೆ ಅವಕಾಶವಿಲ್ಲ. ಮುತ್ತೈದೆ ತಿಥಿಯನ್ನೇ ಸುಮಂಗಲೀ ಪೂಜೆಯಂತೆ ನಡೆಸಬೇಕು, ಮುತ್ತೈದೆಯನ್ನು ಭೋಜನಕೆ ಕರೆದು ಆಕೆಗೆ ಮಂಗಳ ದ್ರವ್ಯಗಳನ್ನು ಹೂವು, ಗಂಧ, ಬಳೆ, ಫಲ, ತಾಂಬೂಲ ದಕ್ಷಿಣೆಗಳನ್ನು ಕೊಡಬೇಕು. ಅನುಕೂಲವಿದ್ದವರು ಮರದ ಬಾಗಿನ ಸೀರೆ ಕುಬುಸಗಳನ್ನು ಕೊಡಬಹುದು. ಪತಿ ಜೀವಂತವಾಗಿರುವವರೆಗೂ ಮುತ್ತೈದೆ ತಿಥಿ ಮಾಡಬೇಕು. ಭಾದ್ರಪದ ಕೃಷ್ಣದಲ್ಲಿ ಬರುವ ಅವಿಧವಾ ನವಮಿಯ ಶ್ರಾದ್ಧವು ಪತಿಯ ಜೀವಂತನಾಗಿರುವವರಿಗೆ ಮಾತ್ರ. ಪತಿಯ ಮರಣಾನಂತರ ಅವಿಧವಾನವಮಿ ಶ್ರದ್ಧ ಮಾಡಬೇಕಾಗಿಲ್ಲ

ಪಿತೃ ಅಂದರೆ ತಂದೆ ಜೀವಂತವಾಗಿರುವ ತನಕ ಮಕ್ಕಳಿಗೆ (ಪುತ್ರರಿಗೆ) ಶ್ರಾದ್ಧ ತರ್ಪಣಾದಿಗಳಿಗೆ ಅಧಿಕಾರವಿಲ್ಲ, ಆದರೆ ತಂದೆ ಜೀವಂತವಿದ್ದಾಗ್ಯೂ ತಾಯಿ ಮೃತಳಾದರೆ ಪುತ್ರರು ತಾಯಿಯ ಮೃತ ಕರ್ಮಗಳನ್ನು ಮತ್ತು ಮಾಸಿಕ ಶ್ರಾದ್ಧಗಳನ್ನು ಮಾಡಲೇ ಬೇಕು. ಮಾತೃ ಸ್ಥಾನ ಅತಿ ದೊಡ್ಡದು ಅತಿ ಪವಿತ್ರವಾದದ್ದು, ಮಾತೃ ಸ್ಥಾನದ ನಂತರವೇ ಪಿತೃ, ಗುರು, ಆಚಾರ್ಯ ಮತ್ತು ದೇವರ ಸ್ಥಾನಗಳು.

Rarest Archiver

ಶ್ರೀ ರಾಘವೇಂದ್ರ ಸೇವಾ ಸಮಿತಿ (ರಿ.)
ಸುಧೀಂದ್ರನಗರ (ಈಜುಕೊಳದ ಬಡಾವಣೆ) ಮಲ್ಲೇಶ್ವರಂ
ಬೆಂಗಳೂರು–560 003

ಶ್ರೀ ತುಲಸೀದಳ ಪ್ರಕಟಣ ಮಾಲೆ

ಈ ಕೆಳಕಂಡ ಪುಸ್ತಕಗಳು ನಮ್ಮಲ್ಲಿ ದೊರೆಯುತ್ತವೆ.

1. ಸಂಕ್ಷಿಪ್ತ ಯಜ್ಞೋಪವೀತ ಧಾರಣ ವಿಧಿ
2. ತರ್ಪಣ ವಿಧಾನ
3. ತತ್ವಸಂಖ್ಯಾನ ಮತ್ತು ತತ್ವ ವಿವೇಕ
4. ಶ್ರೀ ರಾಮಚಾರಿತ್ರ ಮಂಜರಿ ಮತ್ತು ಶ್ರೀ ಕೃಷ್ಣಚಾರಿತ್ರ ಮಂಜರಿ
5. ಭಾರತ ತಾತ್ಪರ್ಯ ನಿರ್ಣಯಾರ್ಥ ಸಂಗ್ರಹ
6. ಶ್ರೀ ನಾರಾಯಣವರ್ಮ, ಶ್ರೀ ರುದ್ರಗೀತೆ ಮತ್ತು ದುರ್ಗಾಸ್ತೋತ್ರ
7. ಶ್ರೀ ಭವಿಷ್ಯೋತ್ತರ ಪುರಾಣ, ಶ್ರೀ ವೆಂಕಟೇಶ್ವರ ಮಹಾತ್ಮೆ (ಶ್ರೀನಿವಾಸ ಕಲ್ಯಾಣ ವಚನ ಕಾವ್ಯ)

ಮಾರಾಟಗಾರರಿಗೆ 25% ಕಮಿಷನ್ ಕೊಡಲಾಗುತ್ತೆ

ಮಾತೃ ಪ್ರಿಂಟ್ಸ್, ನಾಗಪ್ಪ ಬೀದಿ, ಅರಮನೆ ನಗರ, ಬೆಂಗಳೂರು–3